ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜೂನ್-2016
ಬೆಲೆ ರೂ. 1



## ಸಂಘದಲ್ಲಿ

## ಜೋಗಿಯ ರಾಣಿ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 9
ಜೂನ್ 2016, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಆಶಾಲತಾ ಎಂ.:
9891249149
ಎಸ್.ಸಿ. ಹೇಮಲತ:
9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ
9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ:
9654555795
ಜಮುನಾ ಸಿ. ಮಠದ:
9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್:
9811689337
ರಾಧಾಕೃಷ್ಣ:
9818252183
ಪೂಜಾ ಪಿ. ರಾವ್:
9810882498
ವಿ.ವಿ.ಬಿರಾದಾರ:
9873005409
ಸಖಾರಾಮ ಉಪ್ಪೂರು
9958807225
ಸುಮಿತಾ ಮುರಗೋಡ
9873000333
ಶಶಿಕಾಂತ್ ಪಾಟಿಲ್
9650182413
ಬಾಬುರಾಜ್ ಪೂಜಾರಿ
9818807696
ಎಸ್. ಪರಮೇಶ್
9015332380
ತ್ಯಾಗೇಶ್ ಮೂರ್ತಿ
9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಬಸವರಾಜ್ ಎಸ್. ಕಲ್ಲೂರು
ಎನ್.ಎ. ಮಾಧವ
ಡಾ. ಅಹಲ್ಯಾ ಚಿಂತಾಮಣಿ

## ನೇರ ಮಾತು

ದಶಕಗಳ ಹಿಂದೆ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯ ಆರಂಭಗೊಂಡ ನಂತರ ಸಂಘದ ಕಾರ್ಯವೈಖರಿ ಬದಲಾವಣೆಗೊಂಡು ಹೊಸ ಹುರುಪು ಹಾಗೂ ಹೊಸ ದಿಕ್ಕಿನತ್ತ ವೈವಿಧ್ಯಮಯ ಚಟುವಟಿಕೆಗಳು ಹಾಗೂ ಅರ್ಥಪೂರ್ಣ ಯೋಚನೆಗಳತ್ತ ಹೆಜ್ಜೆ ಇಟ್ಟಿತ್ತು. ಆ ಸಂದರ್ಭದಲ್ಲಿ ಭಾರತ ಸರ್ಕಾರದಲ್ಲಿ ಇದ್ದ ಕನ್ನಡಿಗ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ ಕೇವಲ ಬೆರಳೆಣಿಕೆಗೆ ಸೀಮಿತವಾಗಿತ್ತು. ಕನ್ನಡಿಗರೆಲ್ಲಾ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವೃತ್ತಿಪರ ವಿದ್ಯಾಭ್ಯಾಸಕ್ಕೆ ಅತ್ಯಂತ ಆದ್ಯತೆ ಕೊಡುತ್ತಿದ್ದು ಐ.ಎ.ಎಸ್. ಬಗ್ಗೆ ಯಾರೂ ಕಾಳಜಿ ವಹಿಸುತ್ತಿರಲಿಲ್ಲ. ಇದನ್ನು ಮನಗಂಡ ಅಂದಿನ ಕಾರ್ಯಕಾರಿ ಸಮಿತಿಯು ದೆಹಲಿಗೆ ಐ.ಎ.ಎಸ್. ತರಬೇತಿಗಾಗಿ ಬರುವ ವಿದ್ಯಾರ್ಥಿಗಳಿಗೆ ದೆಹಲಿ ಕರ್ನಾಟಕ ಸಂಘದಿಂದ ವಿಶೇಷ ನೆರವು ನೀಡುವ ಬಗ್ಗೆ ಚರ್ಚಿಸಿ, ಬರುವ ವಿದ್ಯಾರ್ಥಿಗಳಿಗೆ ಒಂದು ವಾರ ಉಳಕೊಳ್ಳುವ ವ್ಯವಸ್ಥೆ (ಡಾರ್ಮೆಟ್ರಿ) ಹಾಗೂ ಸಂಘದ ಕ್ಯಾಂಟೀನ್‌ನಲ್ಲಿ 50% ರಿಯಾಯಿತಿ ನೀಡುವ ವ್ಯವಸ್ಥೆಯನ್ನು ಮಾಡಿತು. ಇದರ ಜೊತೆಗೆ ಇನ್ನಿತರ ಮಾರ್ಗದರ್ಶನಗಳನ್ನು ಸ್ವತಃ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಬರುವ ಐ.ಎ.ಎಸ್. ವಿದ್ಯಾರ್ಥಿಗಳಿಗೆ ಉತ್ಸಾಹ ತುಂಬುವ ಪ್ರಯತ್ನ ಮಾಡಿದರು. ಇದರ ಪರಿಣಾಮ ಕರ್ನಾಟಕದಿಂದ ದೆಹಲಿಗೆ ಐ.ಎ.ಎಸ್. ತರಬೇತಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಬಂತು. ನಂತರದ ದಿನಗಳಲ್ಲಿ ಕೃಷಿಕ್ ಸರ್ವೋದಯ ಫೌಂಡೇಶನ್ ತರಬೇತಿ ನೀಡುವ ಪ್ರಯತ್ನವನ್ನು ಮಾಡುತ್ತಾ ಬಂದಿದೆ. ಈ ಪ್ರಯತ್ನಕ್ಕೆ ದೆಹಲಿ ಕರ್ನಾಟಕ ಸಂಘ ತನ್ನಿಂದ ಸಾಧ್ಯವಾದ ಸಹಕಾರ ಹಾಗೂ ನೆರವನ್ನು ನೀಡುತ್ತಲೇ ಬಂದಿದೆ.

ಬಹುಶಃ ಇದೀಗ ಸುಮಾರು ಎರಡರಿಂದ ಮೂರು ಸಾವಿರ ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಿದ್ದಾರೆ ಎನ್ನುವುದು ಒಂದು ಒಳ್ಳೆಯ ಬೆಳವಣಿಗೆ ಮಾತ್ರವಲ್ಲ ಈ ವರ್ಷ ಸುಮಾರು 36 ಕನ್ನಡಿಗರು ಐ.ಎ.ಎಸ್.ನಲ್ಲಿ ತೇರ್ಗಡೆಯಾಗಿದ್ದಾರೆ.

ರಾಜ್ಯದಿಂದ ದೆಹಲಿಗೆ ಪಟ್ಟಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಯಾವುದೇ ಅಳುಕು ಇಲ್ಲದೆ ದೆಹಲಿಯಂತಹ ಹೊಸ ಪ್ರದೇಶದಲ್ಲಿ ಹೊಂದಿಕೊಳ್ಳುತ್ತಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಅತ್ಯಂತ ಒಳ್ಳೆಯ ಪ್ರತಿಭೆಗಳಿದ್ದರೂ ಹೆಣ್ಣು ಮಕ್ಕಳನ್ನು ದೆಹಲಿಗೆ ಕಳುಹಿಸಿಕೊಡಲು ಹಿಂದೇಟು ಹಾಕುತ್ತಾರೆ. ಹೀಗಾಗಿ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಆಕಾಂಕ್ಷೆ ಇದ್ದರೂ ಕೂಡಾ ಅವಕಾಶದಿಂದ ವಂಚಿತರಾಗುತ್ತಾರೆ. ಈ ನಿಟ್ಟಿನಲ್ಲಿ ಇಂತಹ ವಿದ್ಯಾರ್ಥಿಗಳಿಗೆ ದೆಹಲಿ ಕರ್ನಾಟಕ ಸಂಘವು ಸ್ಪಂದಿಸಿ ಸಹಕಾರ ನೀಡುವ ಆಶಯವನ್ನು ಹೊಂದಿದೆ. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಅಭಿಮತ ರಸಪ್ರಶ್ನೆ

1. 'ಜೋಗಿಯ ರಾಣಿ' ನಾಟಕದಲ್ಲಿನ ಮಲ್ಲವ್ವನ ಪಾತ್ರಧಾರಿಣಿ ಯಾರು?
2. ಬಸವ ಮತ್ತು ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದ ವಿಶೇಷ ಉಪನ್ಯಾಸಕರು ಯಾರು ?
3. ಇತ್ತೀಚೆಗೆ ಅಗಲಿದ ಕನ್ನಡದ ಮೇರು ಸಾಹಿತಿ ಯಾರು?
4. ಸಂಘದ ರಸಮಂಜರಿ ಕಾರ್ಯಕ್ರಮ ಯಾವ ದಿನಾಂಕದಂದು ನಡೆಯಲಿದೆ.?
5. 'ಸಂಸ್ಕೃತಿ ಸಂವೇದ' ಕೃತಿ ಯಾರದ್ದು? ಮತ್ತು ಬಿಡುಗಡೆ ಮಾಡಿದವರು ಯಾರು ?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.06.2016ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಮೇ 2016ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ**
1. ನಾಗರಾಜ ಕೋಟೆ 2. ಗಂಗಾವತರಣ ಮತ್ತು ಮೈಸೂರು ಮಲ್ಲಿಗೆ 3. ದೆಹಲಿಯ ಸಿರಿಫೋರ್ಟ್ ಸಭಾಂಗಣ 4. ಪಂಡಿತ್ ವೆಂಕಟೇಶ್ ಕುಮಾರ್ ಮತ್ತು ಶ್ರೀಮತಿ ಆಶಾ ಹೆಗ್ಡೆ 5. ಗುರ್‌ಗಾಂವ್ ಮತ್ತು ದೆಹಲಿ ಕರ್ನಾಟಕ ಸಂಘದ ಸಭಾಂಗಣ

**ಸರಿಯಾದ ಉತ್ತರ ಕಳುಹಿಸಿದವರು.**
ಶ್ರೀಮತಿ ಶಾಲಿನಿ ವಿ. ನಾಯಕ್, ಡಾ. ಪಿ. ರಾಮಕೃಷ್ಣ ಭಟ್, ಶ್ರೀಮತಿ ನಂದಾ ರಾಘವೇಂದ್ರ, ಧಾರವಾಡ, ಶ್ರೀಮತಿ ಶಾರದಾ ಮಲ್ಲನಗೌಡ ಎಸ್, ಶ್ರೀಮತಿ ಪ್ರೇಮಲತಾ, ಶ್ರೀಮತಿ ಸೌಮ್ಯ ಕೊಟ್ರೇಶ್, ಶ್ರೀ ಮಹೇಂದ್ರ ಎಚ್, ಶ್ರೀ ಭರತ್‌ಕುಮಾರ್ ಎನ್.ಎಂ.

## ಮುನ್ನೋಟ

ಆತ್ಮೀಯ ಸದಸ್ಯರೇ,

ಶಾಲೆಗಳಿಗೆ ಬೇಸಗೆಯ ರಜೆ ಘೋಷಿಸಿದಂತೆ ದೆಹಲಿಯ ಬಹುತೇಕ ಕನ್ನಡಿಗರು ತಮ್ಮ ತಾಯ್ನಾಡಿಗೆ ಹೋಗಿದ್ದಾರೆ. ಈ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಿಗೆ ಬರುವವರ ಸಂಖ್ಯೆಯಲ್ಲಿ ಕೊಂಚಮಟ್ಟದ ಇಳಿಕೆ ಕಾಣಬಹುದು. ಆದರೆ ಪ್ರತಿ ತಿಂಗಳು ಸತತವಾಗಿ ಕಾರ್ಯಕ್ರಮಗಳು ನಡೆಯುತ್ತಿವೆ. ಜೊತೆಗೆ ನಾವು ದೂರದ ನಾಡಿನಿಂದ ಬಂದು ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಈದಿನ ದೆಹಲಿ ಕರ್ನಾಟಕ ಸಂಘವು ಬೃಹತ್ತಾಕಾರವಾಗಿ ಬೆಳೆದು ಸಾಂಸ್ಕೃತಿಕ ಕಾರ್ಯಕ್ರಮಗಳ ಕೇಂದ್ರವಾಗಿದೆ. ಸಂಘವನ್ನು ಇಷ್ಟೊಂದು ಬೃಹತ್ತಾಗಿ ಕಟ್ಟಲು ಬಹಳಷ್ಟು ಜನ ದುಡಿದಿದ್ದಾರೆ. ಅದನ್ನೇ ಮುಂದುವರಿಸಿಕೊಂಡು ನಾವು ಇನ್ನೂ ಎತ್ತರಕ್ಕೆ ಬೆಳೆಯ ಬೇಕಾಗಿದೆ. ಇದು ನಮ್ಮ ಕರ್ತವ್ಯ. ದೆಹಲಿ ಕರ್ನಾಟಕ ಸಂಘವು ಕರ್ನಾಟಕದ ಎಲ್ಲಾ ವರ್ಗ ಮತ್ತು ಸಮುದಾಯದ ಕುರಿತು ಏಕನೀತಿಯನ್ನು ತಾಳುತ್ತಾ ಬಂದಿದೆ. ಅಂತೆಯೆ ಸಂಘದ ಸದಸ್ಯರು ಯಾವುದೇ ಕುಮ್ಮಕ್ಕುಗಳಿಗೆ ಒಳಗಾಗದೇ ಸಂಘಕ್ಕೆ ಇನ್ನಷ್ಟು ಘನತೆ ಮತ್ತು ಗೌರವವನ್ನು ತರಬೇಕಾಗಿದೆ.

ಸಂಘದಲ್ಲಿ ಬಸವ ಮತ್ತು ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮವನ್ನು ಈ ಇಬ್ಬರು ಕ್ರಾಂತಿಕಾರಿ ಶರಣರ ಬದುಕಿನ ಸಂದೇಶದಂತೆ ಎಲ್ಲಾ ಸಮುದಾಯದ ಜನರೂ ಒಂದೇ ಮತ್ತು ಎಲ್ಲರು ಜತೆಯಾಗಿ ಸೇರಿ ಆಚರಿಸಲಾಗಿದೆ. ಬಸವ ಮತ್ತು ಅಕ್ಕಮಹಾದೇವಿಯವರು ಕೇವಲ ಒಂದು ಗುಂಪಿನವರಲ್ಲ. ಅವರು ಇಡೀ ಭಾರತೀಯ ಪರಂಪರೆಯ ಅವಿಭಾಜ್ಯ ಅಂಗವಾಗಿದ್ದು ಎಲ್ಲರಿಗೂ ಸೇರಿದವರು. ಅವರ ಕುರಿತು ಅಧ್ಯಯನ ಮಾಡಿದವರನ್ನು ದೆಹಲಿಗೆ ತರಿಸಿ ಅವರಿಂದ ಅತ್ಯಂತ ಮನೋಜ್ಞವಾದ ವಿಶ್ಲೇಷಣೆಯಿದ್ದ ವಿಚಾರಗಳನ್ನು ತಿಳಿಯಲಾಯಿತು.

ಮುಂಬರುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜುಲೈ 16ರಂದು ಸಾಲಿಗ್ರಾಮ ಮೇಳದಿಂದ ಆಹೋ ರಾತ್ರಿ ಯಕ್ಷಗಾನ, ಜುಲೈ 24ರಂದು ಸ್ಥಳೀಯ ಪ್ರತಿಭೆಗಳಿಂದ ಕನ್ನಡ ರಸಮಂಜರಿ ಕಾರ್ಯಕ್ರಮಗಳು ನಡೆಯಲಿವೆ. ಎಲ್ಲರೂ ಬಂದು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿರಿ.

ಜೋಗಿಯ ರಾಣಿ ನಾಟಕವು ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಇಂತಹ ನಾಟಕಗಳನ್ನು ಮುಂಬರುವ ಸಮಯದಲ್ಲಿ ಕರ್ನಾಟಕದಲ್ಲಿ ಪ್ರದರ್ಶಿಸಲಾಗುವುದು. ಸಮಯದ ಅಭಾವದಿಂದ ಈ ಬಾರಿ ಮೇ–ಜೂನ್ ತಿಂಗಳಲ್ಲಿ ಕರ್ನಾಟಕದಲ್ಲಿ ನಡೆಯಬೇಕಾಗಿದ್ದ ನಾಟಕವನ್ನು ಮುಂದೂಡಲಾಗಿದೆ. ಜೋಗಿಯ ರಾಣಿ ನಾಟಕದಲ್ಲಿ ಭಾಗವಹಿಸಿದ ಎಲ್ಲಾ ಕಲಾವಿದರಿಗೂ ಹಾಗೂ ನಿರ್ದೇಶನ ಮಾಡಿದ ಬಾಲಕೃಷ್ಣ ನಾಯ್ಕ್ ಅವರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಎಲ್ಲಾ ಕನ್ನಡಿಗರ ಪರವಾಗಿ ಅಭಿನಂದನೆಗಳು. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**20 ಜೂನ್ 2016** ಸೋಮವಾರ ಸಂಜೆ 6.30 ಗಂಟೆಗೆ

ಪರಸ್ಪರ, ನಮ್ಮ–ನಿಮ್ಮ ಜೊತೆ ಖ್ಯಾತ ಚುಟುಕು ಕವಿ ದುಂಡಿರಾಜ್

**16 ಜುಲೈ 2016** ಶನಿವಾರ ರಾತ್ರಿ 9.30 ಗಂಟೆಯಿಂದ

ಶ್ರೀ ಸಾಲಿಗ್ರಾಮ ಮೇಳದವರಿಂದ ಅಹೋ ರಾತ್ರಿ ಬಡುಗುತಿಟ್ಟು ಯಕ್ಷಗಾನ ಪ್ರದರ್ಶನ

**24 ಜುಲೈ 2016** ಭಾನುವಾರ ಸಂಜೆ 5.30 ಗಂಟೆಗೆ

ಸ್ಥಳೀಯ ಪ್ರತಿಭೆಗಳಿಂದ ಕನ್ನಡ ರಸಮಂಜರಿ ಕಾರ್ಯಕ್ರಮ

**13 ಮತ್ತು 14 ಅಗಸ್ಟ್ 2016** ಶನಿವಾರ ಮತ್ತು ಭಾನುವಾರ ಸಂಜೆ 5.30 ಗಂಟೆಗೆ

ರಂಗಮಂಟಪ ಟ್ರಸ್ಟ್ ಬೆಂಗಳೂರು ಕಲಾವಿದರಿಂದ – ವೈದೇಹಿ ಅವರ 'ಅಕ್ಕು' ಮತ್ತು ಕೆ.ವೈ. ನಾರಾಯಣ ಸ್ವಾಮಿ ಅವರ 'ಮಲ್ಲಿಗೆ' ಎರಡು ನಾಟಕಗಳ ಪ್ರದರ್ಶನ

**20 ಅಗಸ್ಟ್ 2016** ಶನಿವಾರ ಸಂಜೆ 5.30 ಗಂಟೆಗೆ

ಸ್ಥಳೀಯ ಪ್ರತಿಭೆಗಳಿಂದ ಕನ್ನಡ ರಸಮಂಜರಿ ಕಾರ್ಯಕ್ರಮ

**28 ಅಗಸ್ಟ್ 2016** ಭಾನುವಾರ ಸಂಜೆ 5.30 ಗಂಟೆಗೆ

ರಾಣಿ ಅಬ್ಬಕ್ಕ ಕುರಿತ ಕಾರ್ಯಕ್ರಮ

**11 ಸೆಪ್ಟೆಂಬರ್ 2016** ಭಾನುವಾರ ಸಂಜೆ 5.30 ಗಂಟೆಗೆ

ರನ್ನ ಪ್ರತಿಷ್ಠಾನದ ಸಹಯೋಗದೊಂದಿಗೆ "ಮಹಾ ಕವಿ ರನ್ನ"ನ ಸಾಹಿತ್ಯ ಕಾರ್ಯಕ್ರಮ

**18 ಸೆಪ್ಟೆಂಬರ್ 2016** ಭಾನುವಾರ ತುಳು ಸಂಭ್ರಮ ಕಾರ್ಯಕ್ರಮ

**25 ಸೆಪ್ಟೆಂಬರ್ 2016** ಭಾನುವಾರ

ಸ್ಥಳೀಯ ಪ್ರತಿಭೆಗಳಿಂದ ಕನ್ನಡ ರಸಮಂಜರಿ ಕಾರ್ಯಕ್ರಮ

**8 ಮತ್ತು 9 ಅಕ್ಟೋಬರ್ 2016** ಶನಿವಾರ ಮತ್ತು ಭಾನುವಾರ

ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರದಿಂದ ಹೊರನಾಡ ಕನ್ನಡಿಗರ ಸಮಾವೇಶ

### ದಿನಾಂಕ ನಿಗದಿಯಾಗದ ಕಾರ್ಯಕ್ರಮಗಳು

**ಸಾಹಿತಿ ನಿರಂಜನ ನೆನಪು**

**ನೃತ್ಯ ಮತ್ತು ಹಾಡು**

ಸ್ಥಳೀಯ ಪ್ರತಿಭೆಗಳಿಂದ ಬಹುಭಾಷಾ ನೃತ್ಯ ಮತ್ತು ಬಹುಭಾಷಾ ಹಾಡುಗಳ ಕಾರ್ಯಕ್ರಮ

**ಸಾಹಿತ್ಯ ಕಾರ್ಯಕ್ರಮ**

ಕವಿ ರತ್ನಾಕರ ವರ್ಣಿ ಸಾಹಿತ್ಯ ಕಾರ್ಯಕ್ರಮ

**ನಾಟಕ ಪ್ರದರ್ಶನ**

ಪ್ರೊ. ಎಚ್.ಎಸ್. ಶಿವಪ್ರಕಾಶ್ ನಿರ್ದೇಶನದಲ್ಲಿ ನಾಟಕ ಪ್ರದರ್ಶನ

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 011–26104818

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 9
ಜೂನ್ 2016

**ಅಭಿಮತ ಪ್ರಧಾನ ಸಂಪಾದಕರು**

ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**

ಸಖಾರಾಮ ಉಪ್ಪೂರು
ಚಂದ್ರಶೇಖರ್ ಎನ್.ಪಿ.
ಎಸ್. ಕುಮಾರ್

## ಸಂಪಾದಕೀಯ


# ಆಡಳಿತಶಾಹಿಯತ್ತ ಆಕರ್ಷಣೆ ಅಗತ್ಯ

ಕರ್ನಾಟಕದ ಧ್ವನಿ ದೆಹಲಿಯಲ್ಲಿ ಬಹಳಷ್ಟು ಕ್ಷೀಣ ಎಂಬ ಮಾತನ್ನು ನಾವು ಕೇಳುತ್ತಾ ಇದ್ದೇವೆ. ದೆಹಲಿಯಲ್ಲಿ ಕರ್ನಾಟಕದ ಧ್ವನಿಯನ್ನು ಎತ್ತಿ ಹಿಡಿಯುವವರು ಯಾರು? ಒಂದು, ಕರ್ನಾಟಕದ ಜನರ ಪ್ರತಿನಿಧಿಯಾಗಿ ದೇಶದ ಲೋಕಸಭೆಗೆ ಚುನಾಯಿತರಾಗಿ ಬರುವ ನಮ್ಮ ಲೋಕಸಭಾ ಸದಸ್ಯರು ಮತ್ತು ರಾಷ್ಟ್ರೀಯ ರಾಜಕೀಯ ಪಕ್ಷಗಳಲ್ಲಿ ಕರ್ನಾಟಕದಿಂದ ಮೇಲೇರಿ ಬರುವ ರಾಜಕೀಯ ನಾಯಕರು. ಅವರಲ್ಲಿ ಕೆಲವರು ರಾಜ್ಯಸಭೆಯ ಸದಸ್ಯರಾಗಿರಲೂ ಬಹುದು. ಅಥವಾ ಯಾವುದೇ ಪಕ್ಷಗಳ ಉನ್ನತ ಹುದ್ದೆಗಳನ್ನು ಅಲಂಕರಿಸುವವರೂ ಆಗಿರಬಹುದು. ಕರ್ನಾಟಕದ ಮಾತ್ರವಲ್ಲ ದೆಹಲಿಯಲ್ಲಿರುವ ಕನ್ನಡಿಗರ ಅಭಿಲಾಷೆ ಏನೆಂದರೆ ಜನರ ಪ್ರತಿನಿಧಿಯಾಗಿ ಆಯ್ಕೆಯಾಗಿ ಬಂದ ನಮ್ಮ ಸಂಸತ್ ಸದಸ್ಯರು ಕರ್ನಾಟಕದ ಧ್ವನಿಯನ್ನು ದೆಹಲಿಯಲ್ಲಿ ಎತ್ತಿ ಹಿಡಿಯಬೇಕು. ನವದೆಹಲಿಯ ರಾಷ್ಟ್ರೀಯ ರಾಜಕಾರಣದಲ್ಲಿ ಕರ್ನಾಟಕದ ರಾಜಕಾರಣಿಗಳಿಗೆ ಹೆಚ್ಚಿನ ವರ್ಚಸ್ಸು ಸಿಗಬೇಕು ಎಂಬುದಾಗಿದೆ. ಇದರಿಂದ ದೇಶದ ಆಯವ್ಯಯದಿಂದ ಆರ್ಥಿಕ ಬೆಂಬಲ, ಕೇಂದ್ರ ಸರಕಾರದ ವಿವಿಧ ಇಲಾಖೆಗಳಿಂದ ದೊರೆಯುವ ಸವಲತ್ತುಗಳು ಕರ್ನಾಟಕಕ್ಕೆ ದೊರೆತು ರಾಜ್ಯದ ಅಭಿವೃದ್ಧಿಗೆ ಸಹಾಯವಾಗುತ್ತದೆ. ಕರ್ನಾಟಕದಲ್ಲಿ ಇರುವ ನೈಸರ್ಗಿಕ ಸಂಪತ್ತು, ಪ್ರತಿಭಾವಂತ ಮಾನವ ಸಂಪನ್ಮೂಲ ಮತ್ತು ಉತ್ತಮ ಸಾಮಾಜಿಕ ವ್ಯವಸ್ಥೆಯ ಸದುಪಯೋಗವನ್ನು ಪಡೆಯಲು ಉತ್ತಮ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಆಗಲು ನಮ್ಮ ಪ್ರತಿನಿಧಿಗಳು ಕರ್ನಾಟಕದ ಧ್ವನಿಯನ್ನು ದೆಹಲಿಯಲ್ಲಿ ಮೊಳಗಿಸಬೇಕು.

ದೇಶದ ಆಡಳಿತವನ್ನು ನಡೆಸಲು ಕಾನೂನುಗಳನ್ನು ರಚಿಸುವ ರಾಜ್ಯಾಂಗವಿರುವಂತೆ, ಆಡಳಿತದ ಚುಕ್ಕಾಣಿಯನ್ನು ಹಿಡಿದು ದೇಶವನ್ನು ನಡೆಸುವ ಆಡಳಿತಶಾಹಿಯ ಬೃಹತ್ತಾದ ಪಡೆಯೇ ಒಂದಿದೆ. ದೇಶದ ಆಡಳಿತ ಯಾವುದೇ ರಾಜಕೀಯ ಪಕ್ಷದ ಕೈಯಲ್ಲಿರಲಿ, ಅದನ್ನು ನಿಜವಾಗಿಯೂ ನಡೆಸುವವರು ಆಡಳಿತಶಾಹಿ ವರ್ಗ. ಅವರ ಕೈಯಲ್ಲಿರುವ ಅಧಿಕಾರ ಮತ್ತು ಪ್ರಭಾವ ಯಾವುದೇ ಪ್ರದೇಶದ ಅಭಿವೃದ್ಧಿಯ ದಿಶೆಯನ್ನೇ ಬದಲಿಸಬಹುದು. ದೆಹಲಿಯಲ್ಲಿ ಕೇಂದ್ರ ಸರಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರಾಗಿ ಅವರು ದೇಶದ ಅಭಿವೃದ್ಧಿಗೆ ನೀಡಬಹುದಾದ ಕೊಡುಗೆ ಅಪಾರ. ಈ ಆಡಳಿತಶಾಹಿಯ ಅತ್ಯಂತ ಉನ್ನತ ಸ್ಥಾನದಲ್ಲಿರುವವರೇ ಐಎಎಸ್ ಅಧಿಕಾರಿಗಳು. ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವೀಸಸ್ ಅಥವಾ ಭಾರತೀಯ ನಾಗರೀಕ ಸೇವಾ ಹುದ್ದೆಗಾಗಿ ಕೇಂದ್ರ ಲೋಕಸೇವಾ ಆಯೋಗವು ಪ್ರತಿವರ್ಷ ರಾಷ್ಟ್ರಮಟ್ಟದಲ್ಲಿ ಪರೀಕ್ಷೆಗಳನ್ನು ನಡೆಸುತ್ತದೆ. ಇದರಲ್ಲಿ ಪಾಸಾದವರಿಗೆ ಐಎಎಸ್ ಮಾತ್ರವಲ್ಲದೇ ಉನ್ನತ ಪೋಲೀಸ್ ಸೇವೆಯಾದ ಐಪಿಎಸ್ ಅಥವಾ ಇಂಡಿಯನ್ ಪೋಲೀಸ್ ಸರ್ವೀಸ್, ಐಎಫ್ಎಸ್ ಅಥವಾ ಇಂಡಿಯನ್ ಫಾರಿನ್ ಸರ್ವೀಸ್‌ನಲ್ಲಿ ಕೆಲಸ ಮಾಡುವ ಅವಕಾಶಗಳಿರುತ್ತವೆ. ಇಂತಹ ಉನ್ನತ ಅಧಿಕಾರಶಾಹಿಯ ಹುದ್ದೆಗಳನ್ನು ಅಲಂಕರಿಸಿದವರಲ್ಲಿ ಕರ್ನಾಟಕದವರ ಸಂಖ್ಯೆಯೇನೂ ಗಣನೀಯವಾಗಿಲ್ಲ.

ಇತ್ತೀಚಿನ ವರ್ಷಗಳಲ್ಲಿ, ಕೃಷಿಕ್ ಸರ್ವೋದಯ ಫೌಂಡೇಶನ್‌ನ ದೆಹಲಿ ಶಾಖೆಯ ಗಂಭೀರ ಪ್ರಯತ್ನಗಳಿಂದಾಗಿ ಕರ್ನಾಟಕದಿಂದ ದೆಹಲಿಗೆ ಬಂದು ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಬರೆದು ಉತ್ತಮ ಫಲಿತಾಂಶಗಳನ್ನು ತರುವಲ್ಲಿ ಕರ್ನಾಟಕದ ವಿದ್ಯಾರ್ಥಿಗಳು ಯಶಸ್ವಿಯಾಗುತ್ತಿದ್ದಾರೆ. ಕರ್ನಾಟಕದಿಂದ ಆಯ್ಕೆಯಾಗುವ ವಿದ್ಯಾರ್ಥಿಗಳ ಸಂಖ್ಯೆಯು ಗಣನೀಯವಾಗಿ ಹೆಚ್ಚಾಗುತ್ತಿದೆ. ಸಾಂಸ್ಥಿಕವಾಗಿ ದೆಹಲಿ ಕರ್ನಾಟಕ ಸಂಘವೂ ತನ್ನ ಅಳಿಲ ಸೇವೆಯನ್ನು ಈ ನಿಟ್ಟಿನಲ್ಲಿ ಮಾಡುತ್ತಿದೆ. ಜತೆಗೆ ಹಿರಿಯ ಐಎಎಸ್ ಅಧಿಕಾರಿಗಳು ಮತ್ತು ಶಿಕ್ಷಣತಜ್ಞರು ವೈಯಕ್ತಿಕ ನೆಲೆಯಲ್ಲಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಕರ್ನಾಟಕದ ವಿದ್ಯಾರ್ಥಿಗಳಿಗೆ ಅಮೂಲ್ಯ ಸಲಹೆ ಸೂಚನೆಗಳನ್ನಿತ್ತು ಪ್ರೋತ್ಸಾಹಿಸುತ್ತಿದ್ದಾರೆ. ಹಾಗಾಗಿ ದೆಹಲಿಯಲ್ಲಿ ಕರ್ನಾಟಕದ ಧ್ವನಿಯನ್ನು ಮತ್ತಷ್ಟು ಗಟ್ಟಿಗೊಳಿಸಲು ಕರ್ನಾಟಕದ ಮಂದಿ ಅಧಿಕಾರಶಾಹಿಯಲ್ಲಿ ತೊಡಗಿಸಿಕೊಳ್ಳಬೇಕಾಗಿದೆ. ಈಗಾಗಲೇ ಹತ್ತನೇ ಮತ್ತು ಹನ್ನೆರಡನೇ ತರಗತಿಗಳ ಪರೀಕ್ಷಾ ಫಲಿತಾಂಶಗಳು ಹೊರಬಂದಿದ್ದು, ವಿದ್ಯಾರ್ಥಿಗಳು ಮತ್ತು ಪೋಷಕರು ಉನ್ನತ ಶಿಕ್ಷಣದ ಕುರಿತು ಆಲೋಚಿಸುತ್ತಿದ್ದಾರೆ. ವಿದ್ಯಾರ್ಥಿಗಳು ಇಂಜಿನಿಯರಿಂಗ್, ಮೆಡಿಕಲ್ ಶಿಕ್ಷಣದ ಆಯ್ಕೆಯ ಜತೆಗೆ ಐಎಎಸ್ ಪರೀಕ್ಷೆಗೆ ತಯಾರಿ ನಡೆಸಿ ಸರಕಾರದ ಉನ್ನತ ಹುದ್ದೆಗಳನ್ನು ಅಲಂಕರಿಸುವತ್ತ ಕೂಡಾ ಚಿಂತನೆ ಮಾಡಬೇಕು. ಅ

*ಬಾಲಕೃಷ್ಣ ನಾಯ್ಕ್ ಡಿ.*




# ಸಂಘದಲ್ಲಿ 'ಸಂಸ್ಕೃತಿ ಸಂವೇದ' ಕೃತಿ ಲೋಕಾರ್ಪಣೆ

ಬರವಣಿಗೆಯ ಪ್ರಕ್ರಿಯೆಯು ಸಂಕೀರ್ಣವಾಗಿದ್ದು, ಒಂದು ಕಡೆ ಕುಳಿತು ಬರೆಯಲು ತೊಡಗಿದರೆ ಅದು ಧ್ಯಾನವಾಗುತ್ತದೆ ಎಂದು ದೆಹಲಿ ಕರ್ನಾಟಕ ಸಂಘದ ಮಾಜೀ ಅಧ್ಯಕ್ಷ ಮತ್ತು ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ವೆಂಕಟಾಚಲ ಹೆಗಡೆ ಅವರು ಹೇಳಿದರು.

ಅವರು ದೆಹಲಿಯ ಲೇಖಕ ಡಾ. ವೈ. ಅವನೀಂದ್ರನಾಥ್ ರಾವ್ ಅವರ ವಿಮರ್ಶಾ ಲೇಖನಗಳ ಸಂಕಲನ 'ಸಂಸ್ಕೃತಿ ಸಂವೇದ'ದ ಲೋಕಾರ್ಪಣೆಯನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಮೇ 29ರಂದು ನಡೆಸಿ ಮಾತಾಡುತ್ತಿದ್ದರು. ಬರೆಯುವ ಕೆಲಸ ಸುಲಭವಾದುದಲ್ಲ. ದೆಹಲಿಯಲ್ಲಿ ಸುಮಾರು ಒಂದೂವರೆ ದಶಕಗಳಿಂದ ನೆಲೆಸಿರುವ ಡಾ. ರಾವ್ ಅವರು ಸಾಹಿತ್ಯದ ಸೃಜನಶೀಲತೆಯಲ್ಲಿ ತೊಡಗಿಸಿಕೊಂಡವರು. ಅವರ ಕೃತಿ ಸಂಸ್ಕೃತಿ ಸಂವೇದವು ಸಾಹಿತ್ಯಿಕವಾಗಿ ಸೃಜನಶೀಲ ಹಾಗೂ ಆಸಕ್ತಿದಾಯಕವಾಗಿದೆ ಎಂದರು. ಅವರ ಕೃತಿಯಲ್ಲಿ ಸಂಸ್ಕೃತಿ ಮತ್ತು ಸಂವೇದದ ನೆಲೆಗಳಿವೆ. ಹಿರಿಯ ಸಾಹಿತಿಗಳ, ಸಂಸ್ಕೃತಿಯ ಅಂಗವಾದ ಯಕ್ಷಗಾನ ಕಲಾವಿದರ ಮತ್ತು ಗ್ರಂಥಗಳ ಕುರಿತು ಅನನ್ಯವಾದ ಲೇಖನಗಳಿವೆ ಎಂದು ಡಾ. ಹೆಗಡೆ ಅವರು ಹೇಳಿದರು. ಕೃತಿಯಲ್ಲಿ ಮೇರು ಸಾಹಿತಿ ಡಾ. ಸಾ.ಶಿ. ಮರುಳಯ್ಯನವರು ಬರೆದಿರುವ ಮುನ್ನುಡಿಯು ಡಾ. ರಾವ್ ಅವರ ಲೇಖನಗಳಿಗೆ ಪೂರಕವಾಗಿದೆ. ಲೇಖನಗಳು ವಿಮರ್ಶಾ ಲೇಖನಗಳಾದರೂ ಅದರಲ್ಲಿ ಲೇಖಕರ ಭಾವನೆಗಳು ತುಂಬಿವೆ ಎಂದು ಅವರು ನುಡಿದರು. ಲೇಖಕರು ಬರೆದ ವಿಷಯಗಳ ಕುರಿತು ಇನ್ನಷ್ಟೂ ವಿಸ್ತಾರವಾಗಿ ಗಂಭೀರ ಓದುಗರಿಗೆ ಅನುಕೂಲವಾಗುವಂತೆ ಪೂರಕ ಕೃತಿಗಳ ಅಡಿ ಟಿಪ್ಪಣಿಗಳನ್ನು ಒದಗಿಸಿ ಕೊಡಬೇಕಿತ್ತು ಎಂದು ಡಾ. ಹೆಗಡೆ ಅಭಿಪ್ರಾಯಪಟ್ಟರು.

ಹೊರನಾಡಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ವೃತ್ತಿಯಲ್ಲಿರುವ ಬರಹಗಾರರು ಕನ್ನಡದ ಸಂದರ್ಭದಲ್ಲಿ ಬರೆಯುವಾಗ ಮೇಲ್ಪದರನ್ನು ಬಿಟ್ಟು ಆಳವಾದ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಬೇಕು. ಹೊರನಾಡಿನಲ್ಲಿರುವ ನಮಗೆ ಸಿಗುವ ಕರ್ನಾಟಕಕ್ಕಿಂತ ಭಿನ್ನವಾದ ಸನ್ನಿವೇಶಗಳನ್ನು ಅರ್ಥ ಮಾಡಿ ಅಂತಹ ಪ್ರಸಂಗಗಳನ್ನು ಸೃಜನಶೀಲತೆಯ ಶಕ್ತಿಯನ್ನಾಗಿ ಮಾಡಿ ಸಾಹಿತ್ಯವನ್ನು ರಚಿಸಬೇಕು ಎಂದು ಡಾ. ಹೆಗಡೆ ಅವರು ವಿವರಿಸಿದರು. ದೆಹಲಿ ಕರ್ನಾಟಕ ಸಂಘದಲ್ಲಿ ದೊಡ್ಡಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುವಂತೆ ಸಾಹಿತ್ಯಾಸಕ್ತ ಕಾರ್ಯಕ್ರಮಗಳು ನಿರಂತರ ನಡೆದು ಮುಕ್ತವಾದ ಚರ್ಚೆಗಳು ನಡೆಯಬೇಕು ಎಂದು ಡಾ. ವೆಂಕಟಾಚಲ ಹೆಗಡೆ ಅವರು ಆಶಿಸಿದರು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಡಾ. ಅವನೀಂದ್ರನಾಥ್ ಅವರು ಶಾಂತಿಪ್ರಿಯ ಬರಹಗಾರರು. ನೇರ ಮತ್ತು ಸರಳವಾಗಿ ಸಾಮಾನ್ಯ ಓದುಗರು ವಿಷಯದ ಕುರಿತು ಅಲ್ಪ ಸಮಯದಲ್ಲಿ ವಿವರಗಳನ್ನು ಪಡೆಯುವಂತೆ ಅವರು ಬರೆಯುತ್ತಾರೆ ಎಂದು ಶ್ರೀ ಬೆಳ್ಳಾರೆ ಅವರು ಅಭಿಪ್ರಾಯಪಟ್ಟರು. ಡಾ. ರಾವ್ ಅವರು ದೆಹಲಿ ಕರ್ನಾಟಕ ಸಂಘ ಮತ್ತು ಇತರ ಸಂಸ್ಥೆಗಳಲ್ಲಿ ಕನ್ನಡದ ಕೃತಿಗಳು ಪ್ರಕಟವಾಗುವಂತೆ ಸಹಕರಿಸಿದ್ದಾರೆ ಎಂದು ಅವರು ನುಡಿದರು.

ವಿಶೇಷ ಅತಿಥಿಯಾಗಿ ಭಾಗವಹಿಸಿದ ಇಂಗ್ಲೆಂಡ್‌ನ ದೇವಿಕಾ ಡ್ಯಾನ್ಸ್ ಥಿಯೇಟರ್‌ನ ನೃತ್ಯ ಕಲಾವಿದೆ ದೇವಿಕಾ ರಾವ್ ಅವರು ಮಾತನಾಡಿ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆ ಮೂರೂ ಜತೆಯಲ್ಲಿ ಸಾಗುತ್ತಿರುತ್ತದೆ ಎಂದರು. ಆಧುನಿಕ ತಂತ್ರಜ್ಞಾನಗಳ ಮೂಲಕ ಕನ್ನಡ ಸಾಹಿತ್ಯವನ್ನು ಮುಂದಿನ ತಲೆಮಾರಿಗೆ ತಲುಪಿಸುವಂತಹ ಕೆಲಸವನ್ನು ಮಾಡಬೇಕಾಗಿದೆ ಎಂದು ಅವರು ಹೇಳಿದರು.

ಬರಹಗಾರ ಡಾ. ಅವನೀಂದ್ರನಾಥ್ ರಾವ್ ಅವರು ಮಾತನಾಡುತ್ತಾ ಸಾಹಿತ್ಯವು ಬೆಳೆಯಬೇಕಾದರೆ ಸಕಾರಾತ್ಮಕವಾದ ವಿಮರ್ಶೆಯು ಮುಖ್ಯ ಎಂದರು. ಸತ್ಯಾಸತ್ಯತೆಗಳನ್ನು ವಿಮರ್ಶಿಸಿ ಪಡೆಯುವುದೇ ಅರಿವು ಎಂದ ಅವರು ಗ್ರಂಥಗಳು ಸಂಸ್ಕೃತಿಯ ಭಾಗ ಎಂದರು. ಬೆಂಗಳೂರಿನ ಪ್ರತಿಷ್ಠಿತ ಸಪ್ನಾ ಬುಕ್ ಹೌಸ್‌ನಿಂದ ಪ್ರಕಟವಾದ ಈ ಕೃತಿಯನ್ನು ಹಿರಿಯ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಈಗಾಗಲೇ ಅಭಿಮತದಲ್ಲಿ ಓದುಗರಿಗೆ ಪರಿಚಯಿಸಿದ್ದಾರೆ ಎಂದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ ಅವರು ವಂದನಾರ್ಪಣೆ ಮಾಡಿದರು. ಡಾ. ಅಹಲ್ಯಾ ಚಿಂತಾಮಣಿ ಅವರು ಸೇರಿದಂತೆ ಅನೇಕ ಸಾಹಿತ್ಯಾಸಕ್ತರು ಡಾ. ಅವನೀಂದ್ರನಾಥ್ ರಾವ್ ಅವರನ್ನು ಅಭಿನಂದಿಸಿದರು. ಅ

*ಬಾಲಕೃಷ್ಣ ನಾಯ್ಕ್ ಡಿ.*

> *ಡಾ. ಅವನೀಂದ್ರನಾಥ್* ಅವರು ಶಾಂತಿಪ್ರಿಯ ಬರಹಗಾರರು. ನೇರ ಮತ್ತು ಸರಳವಾಗಿ ಸಾಮಾನ್ಯ ಓದುಗರು ವಿಷಯದ ಕುರಿತು ಅಲ್ಪ ಸಮಯದಲ್ಲಿ ವಿವರಗಳನ್ನು ಪಡೆಯುವಂತೆ ಅವರು ಬರೆಯುತ್ತಾರೆ ಎಂದು *ಶ್ರೀ ಬೆಳ್ಳಾರೆ* ಅವರು ಅಭಿಪ್ರಾಯಪಟ್ಟರು.



# ಸಂಘದಲ್ಲಿ ಬಸವ ಮತ್ತು ಅಕ್ಕ ಮಹಾದೇವಿ ಜಯಂತಿ ಆಚರಣೆ

ದೆಹಲಿ ಕರ್ನಾಟಕ ಸಂಘವು ಬಸವ ಜಯಂತಿ ಮತ್ತು ಅಕ್ಕಮಹಾದೇವಿ ಜಯಂತಿಯನ್ನು ವಿಶೇಷ ಉಪನ್ಯಾಸ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಇದೇ ಮೇ 14ರಂದು ಆಚರಿಸಿತು.

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಉಪಕುಲಪತಿಯಾಗಿರುವ ಡಾ. ಮಲ್ಲಿಕಾ ಎಸ್. ಘಂಟಿ ಅವರು ಮಾತಾಡುತ್ತಾ ಬಸವಣ್ಣನವರು ಒಬ್ಬ ಅಪ್ರತಿಮ ರಾಜಕೀಯ ಮುತ್ಸದ್ದಿಯಾಗಿ, ಸಂಘಟನಕಾರಾನಾಗಿ, ಕ್ರಾಂತಿಕಾರಿಯಾಗಿ ಹನ್ನೆರಡನೇ ಶತಮಾನದ ಸಮಾಜದ ಅಂಕುಡೊಂಕುಗಳ ವಿರುದ್ದ ಧ್ವನಿ ಎತ್ತಿದ್ದಲ್ಲದೆ ಒಂದು ಶಿಸುಬದ್ಧವಾದ ಪರ್ಯಾಯ ವ್ಯವಸ್ಥೆಯನ್ನೇ ಹುಟ್ಟುಹಾಕಿ ಮೂಲಭೂತ ಬದಲಾವಣೆ ತರಲು ಹೋರಾಟ ನಡೆಸಿದರು ಎಂದು ನುಡಿದರು. ಬಸವಣ್ಣನವರು ಒಬ್ಬ ಸಮಾಜ ಶಾಸ್ತ್ರಜ್ಞನಾಗಿ ಮನೋವಿಜ್ಞಾನಿಯಾಗಿ ಹಾಗೂ ಒಬ್ಬ ಸಾಮಾನ್ಯ ಸರಳ ಶರಣನಾಗಿ ಸಮಾಜದ ಶೋಷಣೆಗೊಳಗಾದ ದೀನದಲಿತರು ಮತ್ತು ಮಹಿಳೆಯರನ್ನು ಒಗ್ಗೂಡಿಸಿ ಅವರೆಲ್ಲರಿಗೆ ಧ್ವನಿ ನೀಡಿ ತಮ್ಮ ಅನುಭವ ಮಂಟಪದಲ್ಲಿ ದಿನನಿತ್ಯ ಹೊಸ ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗಳತ್ತ ಅಂದಿನ ಸಮಾಜವನ್ನು ಕೊಂಡೊಯ್ಯುವಲ್ಲಿ ಯಶಸ್ವಿಯಾದರು ಎಂದು ಅವರು ನುಡಿದರು. ಇಪ್ಪತ್ತೊಂದನೇ ಶತಮಾನದಲ್ಲಿ ಆಧುನಿಕ ಮಹಿಳೆಯರು ತಮ್ಮ ಯಾವ ಹಕ್ಕು ಭಾಧ್ಯತೆಗಳಿಗಾಗಿ ಧ್ವನಿ ಎತ್ತಿ ಹೋರಾಡುತ್ತಿದ್ದಾರೆಯೋ ಆ ಎಲ್ಲ ಅಂಶಗಳನ್ನು ಅಕ್ಕಮಹಾದೇವಿಯವರು ಹನ್ನೆರಡನೇ ಶತಮಾನದಲ್ಲಿಯೇ ಮಾಡಿದ್ದರು. ಅವರ ವಚನಗಳಲ್ಲಿ ಮಹಿಳೆಯರ ಶೋಷಣೆಯ ವಿರುದ್ಧ ಕಿಡಿಕಾರಿರುವುದನ್ನು ಕಾಣಬಹುದು ಎಂದು ಡಾ. ಘಂಟಿ ಅವರು ವಚನಗಳನ್ನು ಉಲ್ಲೇಖಿಸಿ ವಿವರಿಸಿದರು.

ಮಾಲೂರಿನ ಸೀನಿಯರ್ ಡಿಗ್ರಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಚಂದ್ರಶೇಖರ್ ನಂಗ್ಲಿ ಅವರು ಮಾತಾಡುತ್ತಾ ಬಸವಣ್ಣ ಹಾಗೂ ಅಕ್ಕಮಹಾದೇವಿಯವರ ವಚನ ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡು ಅಂದಿನ ಮತ್ತು ಇಂದಿನ ಸಮಾಜದ ಹಲವಾರು ಸಾಮಾಜಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ಕ್ಷೇತ್ರದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ವಿವರಿಸಿದರು. ಡಾ. ನಂಗ್ಲಿ ಅವರು ಬಸವಣ್ಣ, ಅಕ್ಕಮಹಾದೇವಿ ಮತ್ತು ಅಲ್ಲಮಪ್ರಭು ಹನ್ನೆರಡನೇ ಶತಮಾನದಲ್ಲಿ ಸಮಾಜದಲ್ಲಿದ್ದ ಕಂದಾಚಾರಗಳನ್ನು ಪ್ರಶ್ನಿಸಿಸುವಂತೆ ಜನಸಾಮಾನ್ಯರನ್ನು ತಯಾರು ಮಾಡಿದ್ದಷ್ಟೇ ಅಲ್ಲದೆ ಸಮಾಜಕ್ಕೆ ಒಂದು ಪರಿಪಕ್ವವಾದ ಸಮಾನತೆ, ಮಾನವೀಯತೆ ಹಾಗೂ ಗೌರವ–ಅನುಭಾವಗಳ ಹೊಸ ಶಕ್ತಿಯನ್ನು ನೀಡಿ ಅಂದಿನ ಸಮಾಜದಲ್ಲಿ ದೌರ್ಜನ್ಯಕ್ಕೊಳಗಾಗಿದ್ದ



ಸಾವಿರಾರು ಸಮುದಾಯಗಳನ್ನು, ಕುಟುಂಬಗಳನ್ನು ಮೇಲಕ್ಕೆತ್ತುವಂತಹ ಒಂದು ಬಹುದೊಡ್ಡ ಸಾಹಸವನ್ನು ಮಾಡಿದರು ಎಂದು ನುಡಿದರು. ಬಸವೇಶ್ವರಮಾರ್ಗದಲ್ಲಿ ನಡೆಯುವಂತೆ ಜನಸಾಮಾನ್ಯರನ್ನು ಪ್ರಚೋದಿಸಿ ಶತಮಾನಗಳಿಂದ ಶೋಷಣೆಗೊಳಗಾಗಿದ್ದವರಿಗೆ ಸಮಾಜದಲ್ಲಿ ಒಂದು ಉತ್ತಮ ಸ್ಥಾನ ಮಾನ ದೊರೆಯುವಂತೆ ಮಾಡಿದರು. ಜೊತೆಗೆ ತಮ್ಮ ದೈನಂದಿನ ಜೀವನದಲ್ಲಿ ತಾವು ಮಾಡುವ ಸಾಮಾನ್ಯ ಕೆಲಸವನ್ನೇ ಭಕ್ತಿ ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಮಾಡಿಕೊಂಡರೆ ಕೈಲಾಸ ಪ್ರಾಪ್ತಿಯಾಗುವುದೆಂಬ ಸರಳ ಸತ್ಯವನ್ನು ಕಾಯಕವೇ ಕೈಲಾಸ ಎಂದು ಕರೆಕೊಟ್ಟು ಲಕ್ಷಾಂತರ ಮಂದಿ ನಿಮ್ನ ವರ್ಗದವರಿಗೆ ಆತ್ಮಸ್ಥೈರ್ಯವನ್ನು ತುಂಬಿದರು ಎಂದು ಅವರು ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯವಾದಿ ಡಾ. ಶರತ್ ಎಸ್. ಜವಳಿ ಅವರು ಇಡೀ ವಚನ ಸಾಹಿತ್ಯದ ಸಾರಾಮೃತವೇ "ಪ್ರಾಮಾಣಿಕ, ಶಿಸ್ತುಬದ್ಧ ಮತ್ತು ಕಠೀಬದ್ಧ ಕಾಯಕ, ದಾಸೋಹ, ಸಮಾನತೆ, ಮಾನವೀಯತೆ ಹಾಗೂ ದಯೆ" ಆಗಿದೆ. ನನ್ನ ಕಳೆದ ಸುಮಾರು ಐದು ದಶಕಗಳ ವೃತ್ತಿ ಜೀವನದಲ್ಲಿ ಸದಾ ನನ್ನನ್ನು ಕಾಡುತ್ತಿರುವ ಸವಾಲು ಎಂದರೆ ಈ ಸರಳ ಸತ್ಯಗಳನ್ನು ನಮ್ಮ ಜೀವನದಲ್ಲಿ ನಮಗೆ ಅಳವಡಿಸಲು-ಅನುಭವಕ್ಕೆ ತರಲು ಅಸಾಧ್ಯವಾಗಿರುವುದು ಎಂದು ಆತಂಕ ವ್ಯಕ್ತಪಡಿಸಿದರು. ಸಮಾಜದ ಮೂಢನಂಬಿಕೆಗಳು, ಕಂದಾಚಾರಗಳು ಹಾಗೂ ದೌರ್ಜನ್ಯದಿಂದಾಗಿ ತೊಂದರೆಗೊಳಗಾದ ನೊಂದ ಜನಾಂಗವನ್ನು ಬಸವಣ್ಣನವರು ತಮ್ಮ ಮಹಾಮನೆಯಲ್ಲಿ ಬಹಳ ಪ್ರೀತಿಯಿಂದ ಬರಮಾಡಿಕೊಂಡರು. ಎಲ್ಲರಿಗೂ ಸಮಾನ ಅವಕಾಶವನ್ನು ಕಲ್ಪಿಸಿ ಅಂತರ್ಜಾತಿ ವಿವಾಹ, ದಾಸೋಹಗಳಂತಹ ಕ್ರಮದಿಂದ ತಾವು ಆಡಿದ್ದನ್ನು ಮಾಡಿ ತೋರಿಸಿದರು. ಅಂತಹ ಮಹಾನುಭಾವರು ತೋರಿಸಿಕೊಟ್ಟ ಮಾನವತಾ ಮಾರ್ಗದಲ್ಲಿ ನಡೆಯಲಾಗದಿರುವುದು ಇಂದಿನ ತಲೆಮಾರಿನ ಅತ್ಯಂತ ದೊಡ್ಡ ದುರಂತ ಎಂದು ಶ್ರೀ ಜವಳಿ ಅವರು ನುಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತ ಸಹೋದರ-ಸಹೋದರಿ, "ಅಯ್ಯ-ಅಣ್ಣ"ಎಂಬ ಭಾವನೆ, ಸರಳ-ಸುಂದರ ಮಾತುಗಳಿಂದಲೇ ಮಾನವ ಸಮಾಜ ಸುಖ-ಶಾಂತಿ ಮತ್ತು ನೆಮ್ಮದಿಯಿಂದ ಬದುಕಲು ಸಾಧ್ಯ ಎಂಬ ಬಸವಣ್ಣ ಮತ್ತು ಅಕ್ಕಮಹಾದೇವಿಯವರ ತತ್ವಗಳು-ವಚನಗಳು-ಬೋಧೆಗಳು ಇಂದಿನ ಈ ಯಾಂತ್ರಿಕ ಜಗತ್ತಿನಲ್ಲಿ ಸದಾ ಒತ್ತಡಕ್ಕೊಳಗಾಗಿ ಪರಿತಪಿಸುತ್ತಿರುವ ನಮಗೆಲ್ಲರಿಗೂ ಮಾರ್ಗದರ್ಶನವಾಗಬೇಕು ಎಂದು ನುಡಿದರು.

ದೆಹಲಿ ಸರಕಾರದ ವಿಶೇಷ ಕಾರ್ಯದರ್ಶಿಯಾದ ಶ್ರೀ ಅಮರನಾಥ್ ತಳವಾಡೆ ಅವರು ಮಾತನಾಡುತ್ತ ಬಸವಣ್ಣನವರು ಜಾತ್ಯಾತೀತ ಮತ್ತು ವರ್ಗ ರಹಿತ ಸಮಾಜಕ್ಕಾಗಿ ಹೋರಾಟ ನಡೆಸಿದರಾದರೂ ಇಂದಿಗೂ ನಾವು ಜಾತಿ ಮತ್ತು ವರ್ಗ ಸಮಾಜದಿಂದ ಹೊರಬರಲಾಗದೇ ಒದ್ದಾಡುತ್ತಿರುವುದು ವಿಷಾದವಾಗಿದೆ ಎಂದರು.

ಸಭಾ ಕಾರ್ಯಕ್ರಮದ ನಂತರ ಬೆಂಗಳೂರಿನ ಗಾನಪ್ರಿಯ ಕಲ್ಚರಲ್ ಅಕಾಡೆಮಿ ಟ್ರಸ್ಟ್‌ನ ಶ್ರೀ ಮೃತ್ಯುಂಜಯ ದೊಡ್ಡವಾಡ ಮತ್ತು ಶ್ರೀಮತಿ ಜ್ಯೋತಿ ರವಿಪ್ರಕಾಶ್ ಅವರಿಂದ ವಚನಗಳನ್ನೊಳಗೊಂಡ ಸುಗಮ ಸಂಗೀತ ಕಾರ್ಯಕ್ರಮವು ನಡೆಯಿತು.

ನೃತ್ಯ ಕುಠೀರ ತಂಡ, ಬೆಂಗಳೂರು ಇವರಿಂದ "ವಚನ ವೈಭವ"ನೃತ್ಯ ರೂಪಕ ಹಾಗೂ ವಿನಯ್ ಕುಮಾರ್ ಶಿಂಧೆ ಮತ್ತು ಅಮ್ರಪಾಲಿ ಸಿಂಧೆ, ತಂದೆ-ಮಗಳ ಜೋಡಿ ರಾಕ್ ಶೈಲಿಯಲ್ಲಿ ಹಾಡಿದ ಬಸವೇಶ್ವರ ವಚನಗಳ ಕಾರ್ಯಕ್ರಮಗಳು ನೆರೆದಿದ್ದ ಜನರನ್ನು ರಂಜಿಸಿತು.

ಕಾರ್ಯಕ್ರಮದ ಆರಂಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಸ್ವಾಗತಿಸಿದರು. ಶ್ರೀ ಎನ್.ಪಿ. ಚಂದ್ರಶೇಖರ್ ಅವರು ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮ ನಿರೂಪಿಸಿದರು. ಅ

**ಸಖಾರಾಮ ಉಪ್ಪೂರು**









# ಸದಾಶಯ ಮೂಡಿಸಿದ

# ಜೋಗಿಯ ರಾಣಿ



ನಕಾರಾತ್ಮಕ ಪಾತ್ರವನ್ನು ಪ್ರಧಾನ ಭೂಮಿಕೆಯಲ್ಲಿ ತಂದು ಆ ಮೂಲಕ ಸಕಾರಾತ್ಮಕ ಚಿಂತನೆಯನ್ನು ಬೆಳೆಸುವ ಮತ್ತು ಸದಾಶಯವನ್ನು ಒಡಮೂಡಿಸುವ ಹಲವು ನಾಟಕಗಳು ರಂಗಭೂಮಿಯಲ್ಲಿ ಪ್ರದರ್ಶನಗೊಂಡಿವೆ. ಅಂತಹ ಒಂದು ಒಳ್ಳೆಯ ಪ್ರಯತ್ನ 'ಜೋಗಿಯ ರಾಣಿ' ನಾಟಕದಲ್ಲಿದೆ. ಜಾನಪದ ಹಿನ್ನೆಲೆಯ ಈ ನಾಟಕವನ್ನು ಇದೇ ಮೇ 15 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ದೆಹಲಿಯ ಕಲಾವಿದರೇ ಸೇರಿಕೊಂಡು ಪ್ರದರ್ಶನ ನೀಡಿದರು. ಈ ನಾಟಕವನ್ನು ರಂಗದ ಮೇಲೆ ತಂದು ಯಶಸ್ವಿಯಾದವರು ನಿರ್ದೇಶಕ ಬಾಲಕೃಷ್ಣ ನಾಯ್ಕ್ ಡಿ.

ನಾಗರಾಜ ಕೋಟೆಯವರು ರಚಿಸಿದ 'ಜೋಗಿಯ ರಾಣಿ' ನಾಟಕದಲ್ಲಿ ಜೋಗಿಯಾಗಲಿ ಅಥವಾ ರಾಣಿಯಾಗಲೀ ಪ್ರಧಾನ ಪಾತ್ರಗಳಲ್ಲ. ಆದರೆ ಪರೋಕ್ಷವಾಗಿ ಜೋಗಿಯ ರಾಣಿಯನ್ನಾಗಿಸುವ ಮಲ್ಲವ್ವನೇ ಇಲ್ಲಿ ಪ್ರಧಾನ ಭೂಮಿಕೆಯಲ್ಲಿ ಕಾಣಿಸುತ್ತಾಳೆ. ಮಲ್ಲಿಗೆ ಎಂಬ ಬಾಲಕಿಯ ಮಲತಾಯಿ ಮಲ್ಲವ್ವ ತಾನು ಅಸೂಯೆಯಿಂದ ಮಲ್ಲಿಗೆಗೆ ತೊಂದರೆ ಬಯಸಿದ ಪರಿಣಾಮ ಅದು ಅವಳಿಗೇ ತಿರುಗುಬಾಣವಾಗುತ್ತದೆ. ಇದನ್ನು ತಿಳಿ ಹಾಸ್ಯದ ಮೂಲಕ ಪ್ರಸ್ತುತಪಡಿಸುವ ಬಗೆ ಮನರಂಜನೆಯೊಂದಿಗೆ ಒಳ್ಳೆಯ ಸಂದೇಶವನ್ನು ನೀಡುತ್ತದೆ.

ಮಲ್ಲಿಗೆಗೆ ಒದಗಿದ ಶ್ರೀಮಂತರ ವೈವಾಹಿಕ ಸಂಬಂಧವನ್ನು ತನ್ನ ಮಗಳು ಸಂಪಿಗೆಗೆ ತರಲು ಮಲ್ಲವ್ವ ಹವಣಿಸುತ್ತಾಳೆ. ಇದಕ್ಕಾಗಿ ಗಂಡ ಬಂಗಾರ ಗೌಡರು ಇಲ್ಲದೇ ಇದ್ದಾಗ ಮನೆಗೆ ಬಂದ ಜೋಗಿಯ ಜೊತೆ ಸಂಬಂಧ ಕುದುರಿಸುತ್ತಾಳೆ. ನಂತರ ಗಂಡನನ್ನೂ ಒಪ್ಪಿಸಿ ಮದುವೆ ಮಾಡಿಸುತ್ತಾಳೆ. ಈ ಮೂಲಕ ತನ್ನ ಹಾದಿ ಸುಗಮವಾಯಿತು ಎಂದು ತಿಳಿಯುತ್ತಾಳೆ. ಜೋಗಿಯ ವೇಷದಲ್ಲಿ ಬಂದವ ಊರಿನ ಅರಸ ಎಂದು ಅರಿವಾದಾಗ ಮಲ್ಲವ್ವ ಪರಿತಪಿಸುತ್ತಾಳೆ. ಮತ್ತೆ ಆಕೆಯ ಸಂಪರ್ಕಕ್ಕೆ ಬಂದ ಭಿಕ್ಷುಕನನ್ನು ರಾಜನೆಂದೇ ತಿಳಿದು ಮಗಳು ಸಂಪಿಗೆಯ ಜೊತೆ ಮದುವೆ ಮಾಡಿಸುತ್ತಾಳೆ. ಆತ ರಾಜನಲ್ಲ ಎಂದು ತಿಳಿದಾಗ ತನ್ನ ದುರಾಸೆಗೆ ಪಶ್ಚಾತ್ತಾಪಪಡುತ್ತಾಳೆ. ಊರಿನ ಅರಸನೂ ಆಗಿರುವ ಅಳಿಯ ಚೆನ್ನರಾಯ ವಿಷಯ ತಿಳಿದು ಭಿಕ್ಷುಕನನ್ನು ತನ್ನ ಸೇನಾಧಿಪತಿಯನ್ನಾಗಿ ಮಾಡುತ್ತಾನೆ. ಸಂಪಿಗೆಗೆ ಕಿರಿಯ ರಾಣಿಯ ಸ್ಥಾನವನ್ನು ನೀಡುತ್ತಾನೆ. ಈ ರೀತಿ ಕತೆ ಸುಖಾಂತ್ಯ













ಕಾಣುತ್ತದೆ. ಇದು ನಾಟಕದ ತಿರುಳು.

ನಾಟಕದಲ್ಲಿ ಮಲ್ಲಿಗೆಗೆ ಪ್ರಸ್ತಾಪವಾದ ಶ್ರೀಮಂತರ ವೈವಾಹಿಕ ಸಂಬಂಧ ಏನಾಯಿತು ಎಂದು ತಿಳಿಯುವುದಿಲ್ಲ. ಸ್ವಾಭಿಮಾನದ ಮಾವನ ಮಾತಿಗೆ ಒಪ್ಪಿ ಅಳಿಯ ಅರಸ ಅವರನ್ನು ಅರಮನೆಯಲ್ಲಿ ಇರುವಂತೆ ಬಲವಂತ ಮಾಡುವುದಿಲ್ಲ. ಆದರೆ ನಾಟಕದ ಕೊನೆಯಲ್ಲಿ ರಾಜಾಜ್ಞೆಯ ಮೂಲಕ ತನ್ನ ಬಳಿ ಇರುವಂತೆ ನೋಡಿಕೊಳ್ಳುತ್ತಾನೆ. ಈ ಕಟ್ಟುನಿಟ್ಟು ಮೊದಲು ಏಕಿರಲಿಲ್ಲ ಎಂಬ ಪ್ರಶ್ನೆ ಏಳುತ್ತದೆ.

ಕೆಲವೆಡೆ ವೇಷಭೂಷಣ ಮತ್ತು ರಂಗ ಸಜ್ಜಿಕೆಗಳಲ್ಲಿ ಆಧುನಿಕತೆಯ ಸ್ಪರ್ಶ ಕಾಣಿಸಿಕೊಂಡಿದ್ದು, ಇದು ಜಾನಪದವನ್ನು ಸಮಕಾಲೀನಗೊಳಿಸುವ ನಿರ್ದೇಶಕರ ಪ್ರಯತ್ನವಾಗಿ ಕಾಣುತ್ತದೆ. ರಂಗದ ಹಿನ್ನೆಲೆಯಲ್ಲಿ ಅಳವಡಿಸಿದ ಜಾನಪದ ಗಾಯನ ಮತ್ತು ಬಳಸಿಕೊಂಡ ಹಾಡುಗಳು ನಾಟಕದ ಕತೆಗೆ ಪೂರಕವಾಗಿದೆ.

ಕನ್ನಡ ರಂಗಭೂಮಿಯಲ್ಲಿ ಸ್ತ್ರೀಯರಿಗೆ ಸಂಬಂಧಿಸಿದಂತೆ ಮಲತಾಯಿ, ಗಯ್ಯಾಳಿ ಮೊದಲಾದ ನಕಾರಾತ್ಮಕ ಪಾತ್ರಗಳಲ್ಲಿ ದಿ. ವೈಶಾಲಿ ಕಾಸರವಳ್ಳಿ, ಸತ್ಯಭಾಮ ಮೊದಲಾದವರು ಸಮರ್ಥವಾಗಿ ನಟಿಸಿ ಮೆಚ್ಚುಗೆಗೆ ಪಾತ್ರರಾಗಿದ್ದರು. ಪ್ರೇಕ್ಷಕರಲ್ಲಿ ಅಸಹನೆ ಮತ್ತು ನಗು ಎರಡನ್ನೂ ಏಕಕಾಲದಲ್ಲಿ ತರಬೇಕಾದ ಪಾತ್ರ ಇದು. 'ಜೋಗಿಯ ರಾಣಿ' ನಾಟಕದಲ್ಲಿ ಮಂಜುಳಾ ನಾಗರಾಜ್ ಮಲತಾಯಿ ಮಲ್ಲವ್ವನ ಪಾತ್ರಕ್ಕೆ ಜೀವ ತುಂಬಿ ನಟಿಸಿದ್ದಾರೆ. ಹಿಂದೆಯೂ ಅವರು ಅತ್ತೆಯ ಪಾತ್ರದಲ್ಲಿ ಕಾಣಿಸಿಕೊಂಡು ಗಮನ ಸೆಳೆದಿದ್ದರು. ಮಲತಾಯಿಯಲ್ಲಿ ಇರಬೇಕಾದ ಅಸೂಯಾ ಭಾವ, ತಾತ್ಸಾರ ಇತ್ಯಾದಿಗಳನ್ನು ತನ್ನ ವಿಶಿಷ್ಟ ಹಾವಭಾವ ಮತ್ತು ಸಂಭಾಷಣೆಯ ಮೂಲಕ ಕಲಾರಸಿಕರ ಮನಗೆಲ್ಲುವಲ್ಲಿ ಮಂಜುಳಾ ಯಶಸ್ವಿಯಾಗಿದ್ದಾರೆ.

ಸೂತ್ರಧಾರಿಣಿಯಾಗಿ ಆಶಾಲತಾ ಎಂ ಹಾಗೂ ಶಿಲ್ಪಾ ಹರಿಪ್ರಿಯಾ ದೃಶ್ಯಗಳ ಕುರಿತು ಕುತೂಹಲಗೊಳ್ಳುವಂತೆ ನೋಡಿಕೊಂಡಿದ್ದಾರೆ. ಜೋಗಿ ಮತ್ತು ರಾಜನಾಗಿ ಮಹಾದೇವ್, ಗೌಡರಾಗಿ ಕೃಷ್ಣರಾಜ್, ಮಲ್ಲಿಗೆಯಾಗಿ ವಿದ್ಯಾಭಟ್, ಸಂಪಿಗೆಯಾಗಿ ಸವಿತಾ ನೆಲ್ಲಿ, ಗೌಡರ ಮೊದಲ ಹೆಂಡತಿಯಾಗಿ ಸುಧಾರಾಣಿ ಅವರು ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಪುಟ್ಟ ಪಾತ್ರಗಳಾದರೂ ಭಟರಾಗಿ ಹರಿಪಿಯಾ ಮತ್ತು ಶಿವಪ್ಪ ಅವರು ತಿಳಿ ಹಾಸ್ಯದ ಹೊನಲನ್ನು ರಂಗದ ಮೇಲೆ ಚೆಲ್ಲಿದ್ದಾರೆ. ಬಾಲ ಕಲಾವಿದರಾಗಿ ಭುವನ ಮತ್ತು ಅವನಿ ಅವರು ತಮ್ಮದೇ ಕೊಡುಗೆ ನೀಡಿದ್ದಾರೆ.

ನಾಟಕದ ಉತ್ತರಾರ್ಧದಲ್ಲಿ ಭಿಕ್ಷುಕನ ಪಾತ್ರದಲ್ಲಿ ಬಂದ ನಾರಾಯಣ ಬಿ. ಅವರು ರಂಗ ಮೇಲೆ ಸಂಚಲನ ಮೂಡಿಸಿದ್ದಾರೆ. ಅವರ ಸಹಜ ನಟನೆ ಪ್ರೇಕ್ಷಕರಿಗೆ ಮೋಡಿ ಮಾಡುವಲ್ಲಿ ಸಫಲವಾಗಿದೆ. ಕೊನೆಯಲ್ಲಿ ಸನ್ಯಾಸಿಯಾಗಿ ಬರುವ ಶಿವಾನಂದ ಇಂಗಳೇಶ್ವರ ಅವರ ಮಾತು ಮತ್ತು ಅಭಿನಯ ಸಮಯೋಚಿತವಾಗಿ ಮೂಡಿ ಬಂದಿದೆ.

ನಾಟಕಕ್ಕೆ ಸಂಗೀತ ನೀಡಿದ ಭೀಮಸೇನ್ ಭಜಂತ್ರಿ, ಪೂಜಾ ಪಿ. ರಾವ್, ಶಾಲಿನಿ, ಎಸ್. ಕುಮಾರ್, ಸುಧೀರ್ ಫಡ್ನೀಸ್, ದಯಾನಂದ ಬಿಂಗೆ ತಂಡ ಗಮನ ಸೆಳೆಯುತ್ತದೆ. ಪ್ರಸಾದನ ಕಲೆ ಮತ್ತು ಹಿನ್ನೆಲೆಯಲ್ಲಿ ಸಹಕರಿಸಿದ ಪ್ರಕಾಶ್ ಶೆಟ್ಟಿ ಉಳೆಪಾಡಿ, ಪ್ರದೀಪ್ ಕುಮಾರ್, ಡಾ. ಸಾಯಿಪ್ರಶಾಂತಿ ಶೆಟ್ಟಿ, ಮಾಲಿನಿ ಪ್ರಹ್ಲಾದ್ ಅವರ ಕಾರ್ಯ ಸ್ತುತ್ಯರ್ಹ.

ಉಳಿದಂತೆ ಮೊದಲ ಹೆಂಡತಿಯ ಸಾವಿನ ಕ್ಷಣಗಳಲ್ಲಿ ಮತ್ತು ಜೋಗಿಯು ಅನುರಕ್ತನಾಗುವ ದೃಶ್ಯಗಳಲ್ಲಿ ಭಾವಾಭಿನಯದ ಕೊರತೆ ಕಾಣಿಸಿಕೊಂಡಿದೆ. ಇಂತಹ ಸಂದರ್ಭಗಳಲ್ಲಿ ನಾಟಕದ ಲಯ ತಪ್ಪದಂತೆ ನೋಡಿಕೊಳ್ಳುವುದು ಅಗತ್ಯ. ಅ

***ಡಾ. ವೈ. ಅವನೀಂದ್ರನಾಥ್ ರಾವ್***



# ಆಕೃತಿ-2016

# ನರಸಿಂಹಮೂರ್ತಿ ಎಂ. ಎನ್. ಅವರ

# ಏಕವ್ಯಕ್ತಿ ಕಲಾಪ್ರದರ್ಶನ

ತುಮಕೂರಿನ ಯುವ ಚಿತ್ರ ಕಲಾವಿದ ನರಸಿಂಹ ಮೂರ್ತಿ ಎಂ.ಎನ್. ಅವರ ಏಕವ್ಯಕ್ತಿ ಕಲಾ ಪ್ರದರ್ಶನ ಆಕೃತಿ–2016 ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಇದೇ ಮೇ 14ರಿಂದ 16ರ ವರೆಗೆ ನಡೆಯಿತು.

ವಿಷ್ಣುವಿನ ದಶಾವತಾರವನ್ನು ಸೂಕ್ಷ್ಮ ಹಾಗೂ ಸಾಂಪ್ರದಾಯಿಕ ಚಿತ್ರಕಲಾ ಶೈಲಿಯ ಮೂಲಕ ಹೊಸ ರೂಪು ಮತ್ತು ಅವತಾರಗಳನ್ನು ಅದ್ಭುತವಾಗಿ ಎಕ್ರ್‍ಲಿಕ್‌ನಲ್ಲಿ ಕ್ಯಾನ್‌ವಾಸ್‌ಗಳ ಮೇಲೆ ಮೂಡಿಸಿದುದನ್ನು ದೆಹಲಿಯಲ್ಲಿ ಮೊದಲ ಬಾರಿಗೆ ತಮ್ಮ ಏಕವ್ಯಕ್ತಿ ಕಲಾಪ್ರದರ್ಶನದಲ್ಲಿ ಪ್ರದರ್ಶಿಸಿ ಕಲಾಸಕ್ತರನ್ನು ತಮ್ಮೆಡೆಗೆ ಸೆಳೆದರು. ಅತ್ಯಂತ ಕಲಾತ್ಮಕವಾಗಿ, ವರ್ಣರಂಜಿತವಾಗಿ ಮತ್ತು ಆಕರ್ಷಕವಾಗಿ ಮೂಡಿ ಬಂದಿರುವ ಈ ಭಿನ್ನ ದಶಾವತಾರಗಳ ಕಲಾಕೃತಿಗಳು ದೆಹಲಿಯ ಕನ್ನಡ ಮತ್ತು ಕನ್ನಡೇತರ ಕಲಾ ರಸಿಕರನ್ನು, ಕಲಾವಿದರನ್ನು ಹಾಗೂ ಕಲಾ ವಿದ್ಯಾರ್ಥಿಗಳನ್ನು ಸತತ ಮೂರು ದಿನಗಳ ಕಾಲ ತನ್ನೆಡೆಗೆ ಸೆಳೆದು ಕಲಾವಿದ ಮೂರ್ತಿಯವರಿಗೆ ಒಳ್ಳೆಯ ಪ್ರೋತ್ಸಾಹ ಮತ್ತು ಸ್ಫೂರ್ತಿ ದೊರೆಯಿತು.

ನರಸಿಂಹ ಮೂರ್ತಿ ಅವರು ತುಮಕೂರಿನ ರವೀಂದ್ರ ಕಲಾನಿಕೇತನ, ಕಲಬುರ್ಗಿಯ ಕಾಲೇಜ್ ಆಫ್ ಆರ್ಟ್ ಹಾಗೂ ಪಶ್ಚಿಮ ಬಂಗಾಳದ ಶಾಂತಿನಿಕೇತನದಲ್ಲಿ ಕಲೆಯಲ್ಲಿ ಶೈಕ್ಷಣಿಕ ತರಬೇತಿ ಪಡೆದಿದ್ದಾರೆ. ಅವರು ಈಗಾಗಲೇ ಕರ್ನಾಟಕದ ನಾನಾ ಪ್ರದೇಶಗಳಲ್ಲಿ ಅಲ್ಲದೇ ಹೈದರಾಬಾದ್, ಪಾಂಡೀಚೆರಿ, ನಾಗಪುರ, ಲಕ್ನೋ, ಪಶ್ಚಿಮ ಬಂಗಾಳಗಳಲ್ಲಿ ತಮ್ಮ ಕಲಾ ಪ್ರದರ್ಶನವನ್ನು ಯಶಸ್ವಿಯಾಗಿ ಮಾಡಿದ್ದಾರೆ.

ಸಂಘದ ಆರ್ಟ್ ಗ್ಯಾಲರಿಯಲ್ಲಿ ಮೇ 14ರಂದು ಕಲಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ದೆಹಲಿಯ ಕಲಾವಿದ ಸುಧೀರ್ ಪಢ್ನೀಸ್ ಅವರು ನರಸಿಂಹಮೂರ್ತಿಯವರಂತಹ ಕರ್ನಾಟಕದ ಮತ್ತು ದೆಹಲಿಯ ಕನ್ನಡದ ಯುವ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಉತ್ತೇಜನ ನೀಡುವ ದಿಶೆಯಲ್ಲಿ ದೆಹಲಿ ಕರ್ನಾಟಕ ಸಂಘವು ಮಹತ್ತರವಾದ ಕಾರ್ಯವನ್ನು ಮಾಡುತ್ತಿದೆ ಎಂದರು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತಾಡುತ್ತಾ ಕರ್ನಾಟಕದಿಂದ ಬರುವ ಹಾಗೊ ದೆಹಲಿಯಲ್ಲಿ ನೆಲೆಸಿರುವ ಪ್ರತಿಭಾವಂತ ಕನ್ನಡದ ಹೊಸ ಕಲಾವಿದರನ್ನು ಗುರುತಿಸಿ ದೇಶದ ರಾಜಧಾನಿಯಲ್ಲಿ ಪ್ರೋತ್ಸಾಹಿಸುವ ಉದ್ದೇಶದಿಂದ ದೆಹಲಿ ಕರ್ನಾಟಕ ಸಂಘವು ಕಳೆದ ನಾಲ್ಕು ವರ್ಷಗಳಿಂದ ತನ್ನದೇ ಆದ ರೀತಿಯಲ್ಲಿ ಕೆಲಸ ಮಾಡುತ್ತ ಬಂದಿದೆ ಎಂದು ನುಡಿದರು. ಈ ನಿಟ್ಟಿನಲ್ಲಿ



ಮುಂದಿನ ಮೂರು ತಿಂಗಳವರೆಗೆ ಕರ್ನಾಟಕದಿಂದ ಬರುವ ಎಲ್ಲ ಕಲಾವಿದರಿಗೆ ನಿಶುಲ್ಕವಾಗಿ ತಮ್ಮ ಕಲಾಪ್ರದರ್ಶನವನ್ನು ಮಾಡಲು ಈ ಆರ್ಟ್ ಗ್ಯಾಲರಿಯಲ್ಲಿ ಅವಕಾಶ ಮಾಡಿಕೊಡಲಾಗುವುದು ಎಂದು ನುಡಿದರು.

ಮುಖ್ಯ ಅತಿಥಿಗಳಾದ ದೇಶದ ಹೆಸರಾಂತ ಕಲಾವಿದ ವಿಕಾಸ್ ಕುಲಕರ್ಣಿ ಅವರು ಮಾತನಾಡುತ್ತ ಕಲಾವಿದ ಮೂರ್ತಿ ಅವರು ತಮ್ಮದೇ ಆದ ಒಂದು ವಿಶೇಷ ಶೈಲಿಯನ್ನು ಹೊಂದಿದ್ದು ಅವರ ಎಲ್ಲ ಕಲಾಕೃತಿಗಳಲ್ಲಿ ಹೊಸತನ, ಕ್ರಿಯಾಶೀಲತೆ ಮತ್ತು ನೈಜತೆ ಎದ್ದು ಕಾಣುತ್ತದೆ ಎಂದು ನುಡಿದರು. ಇನ್ನೋರ್ವ ಮುಖ್ಯ ಅತಿಥಿ ಯುಕೋ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ರಮೇಶ್ ಕುಮಾರ ಶರ್ಮಾ ಅವರು ಮಾತನಾಡುತ್ತ ಮೂರ್ತಿ ಅವರು ಇನ್ನೂ ದೊಡ್ಡ ಕಲಾವಿದರಾಗಿ ಬೆಳೆದು ದೇಶ ವಿದೇಶಗಳಲ್ಲಿ ಅವರ ಕಲಾ ಪ್ರದರ್ಶನ ನಡೆಯುವಂತಾಗಲಿ ಎಂದು ಶುಭ ಹಾರೈಸಿದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದನಾರ್ಪಣೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಡಾ. ಅಹಲ್ಯಾ ಚಿಂತಾಮಣಿ, ಸಂಘದ ಕೋಶಾಧಿಕಾರಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಶ್ರೀ ಸಖಾರಾಮ ಉಪ್ಪೂರು, ಶ್ರೀ ಅಮರನಾಥ್ ತಳವಾಡೆ, ಶ್ರೀ ಬಸವರಾಜ್ ಎಸ್. ಕಲ್ಲೂರ್, ಡಾ. ಚಂದ್ರಶೇಖರ್ ನಂಗ್ಲಿ, ಶ್ರೀ ಚಂದ್ರಶೇಖರ್ ಎನ್.ಪಿ., ಶ್ರೀ ಶಿವಾನಂದ ಇಂಗಳೇಶ್ವರ, ಮೊದಲಾದ ದೆಹಲಿಯ ಗಣ್ಯ ಕನ್ನಡಿಗರು ಉಪಸ್ಥಿತರಿದ್ದರು. ಅ

***ಸಖಾರಾಮ ಉಪ್ಪೂರು***

# ಅಗಲಿದ ಮೇರು ಸಾಹಿತಿ ದೇ. ಜವರೇ ಗೌಡ

ದೀರ್ಘಕಾಲದ ಅನಾರೋಗ್ಯದ ಕಾರಣದಿಂದ ಮೈಸೂರಿನ ಆಸ್ಪತ್ರೆಯೊಂದರಲ್ಲಿ ಇದೇ ಮೇ 30ರಂದು ನಿಧನರಾದ ಕನ್ನಡದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ನಾಡೋಜ ದೇ. ಜವರೇ ಗೌಡ (98) ಅವರು ಸಾಹಿತಿಯಾಗಿ, ಜಾನಪದ ವಿದ್ವಾಂಸನಾಗಿ ಮತ್ತು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಅಪಾರವಾದ ಕನ್ನಡದ ಸೇವೆಯನ್ನು ಸಲ್ಲಿಸಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ದೇಜಗೌ ಅವರು 1969ರಿಂದ 1975ರ ವರೆಗೆ ಕುಲಪತಿಯಾಗಿದ್ದರು. ಮಹಾರಾಜ ಕಾಲೇಜಿನಲ್ಲಿದ್ದ ಕನ್ನಡ ಸ್ನಾತಕೋತ್ತರ ಅಧ್ಯಯನ ವಿಭಾಗದ ಸ್ಥಳಾಂತರ ಮತ್ತು ಮಾನಸಗಂಗೋತ್ರಿಯಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸ್ಥಾಪನೆಗೆ ಕಾರಣಕರ್ತರಾದರು. ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾಂಗ, ಅಧ್ಯಯನಾಂಗ ಮತ್ತು ಪ್ರಸಾರಾಂಗಗಳಿಗೆ ಒತ್ತುಕೊಟ್ಟು ಬೆಳೆಸಿದರು.

ಕಂಡಿದೆ. ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಹಾಗೂ ಕುವೆಂಪು ವಿದ್ಯಾ ಪರಿಷತ್ ಆರಂಭಿಸಿ ಕುವೆಂಪು ಹೆಸರಿನಲ್ಲಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆ ನಡೆಸುತ್ತಿದ್ದರು. ಅಲ್ಲದೇ ಕನ್ನಡದ ಹಿರಿಯ ಚೇತನಗಳ ನೆನಪು ಮಾಸದಂತೆ ಮಾಸ್ತಿ, ಪುತಿನ, ಬಿಎಂಶ್ರೀ ಮೊದಲಾದವರ ನೆನಪಿನ ಉಪನ್ಯಾಸಗಳನ್ನು ಏರ್ಪಡಿಸಿದರು.

ಕನ್ನಡದಲ್ಲಿ ಸುಮಾರು 40 ಜೀವನ ಚರಿತ್ರೆಗಳನ್ನು ರಚಿಸಿದ್ದು ದೇಜಗೌ ದಾಖಲೆ. ಅವರ ಭಾಷಣಗಳೇ ನಾಲ್ಕು ಸಂಪುಟಗಳು. ಹೋರಾಟದ ಬದುಕು ಎಂಬ ಎರಡು ಭಾಗಗಳ ಆತ್ಮಕಥೆಗಳು ಪ್ರಕಟವಾಗಿವೆ. ಜತೆಗೆ, 'ನೆನಪಿನ ಬುತ್ತಿ' ಕೃತಿ ಕೂಡಾ ಪ್ರಕಟವಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಅವಧಿಯಲ್ಲಿ ಅವರು ಕನ್ನಡ ವಿಶ್ವಕೋಶ ಹಾಗೂ ವಿಷಯ ವಿಶ್ವಕೋಶದ 14 ಸಂಪುಟಗಳನ್ನು ಹೊರತಂದರು. 1966ರಲ್ಲಿ ಜಾನಪದವನ್ನು ಕನ್ನಡ ತರಗತಿಗಳಲ್ಲಿ ವಿಶೇಷ ಅಧ್ಯಯನವಾಗಿ ಅಳವಡಿಸಿದರು.

ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಕೂಡಾ ಅವರು ಸೇವೆ ಸಲ್ಲಿಸಿದ್ದರು. ದೇಜಗೌ ಅವರು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಚೆಕ್ಕೆರೆಯಲ್ಲಿ 1918ರ ಜುಲೈ 6 ರಂದು ಜನಿಸಿದರು. ಅವರು ಅಲ್ಲಿಯೇ ಪ್ರಾಥಮಿಕ ಶಿಕ್ಷಣ ಪೂರೈಸಿದರು. ನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ ಪದವಿ ಪಡೆದರು. ಸಹಾಯಕ ಪ್ರಾಧ್ಯಾಪಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಧಿಕಾರಿಯಾಗಿ, ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದರು. ನಂತರ ಮೈಸೂರು ವಿ.ವಿ ಕನ್ನಡ ಅಧ್ಯಯನ ಸಂಸ್ಥೆಯ ಮೊದಲ ನಿರ್ದೇಶಕರಾದರು. ಮೈಸೂರು ವಿ.ವಿ. ಸಿಂಡಿಕೇಟ್ ಸದಸ್ಯರಾಗಿದ್ದ ಅವರು, 1969ರಲ್ಲಿ ಮೈಸೂರು ವಿ.ವಿ ಕುಲಪತಿಯಾದರು.

ಕುವೆಂಪು ಅವರ ಮಾನಸ ಪುತ್ರರೆಂದು ಕರೆಸಿಕೊಂಡ ದೇಜಗೌ ಅವರು ಕನ್ನಡ ಅಧ್ಯಯನ ಕೇಂದ್ರವನ್ನು ಕುವೆಂಪು ಅಧ್ಯಯನ ಸಂಸ್ಥೆ ಎಂದು ಪುನರ್ ನಾಮಕರಣ ಮಾಡಿದರು. ಕುವೆಂಪು ಅವರಿಂದ ಮತ್ತು ಕುವೆಂಪು ಸಾಹಿತ್ಯದಿಂದ ತುಂಬಾ ಪ್ರೇರಿತರಾಗಿದ್ದ ದೇಜಗೌ ಅವರು ಕುವೆಂಪು ಸಾಹಿತ್ಯದ ಮೇಲೆ ಅಪಾರ ಸಂಖ್ಯೆಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಅವರ 'ಕುವೆಂಪು ಅವರ ಕೊನೆ ದಿನಗಳು' ಎಂಬ 72 ಪುಟಗಳ ಪುಸ್ತಕ ಐದು ಮುದ್ರಣ

ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ಜಾನಪದ ವಸ್ತು ಸಂಗ್ರಹಾಲಯದ ಅಭಿವೃದ್ಧಿಗೆ ನೆರವಾದವರು. ಇವರ ಜಾನಪದ ಸೇವೆ ಗಮನಿಸಿ ಕರ್ನಾಟಕ ವಿಶ್ವವಿದ್ಯಾನಿಲಯದ ಮೂರನೇ ಜಾನಪದ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆರಿಸಿತು. ಕರ್ನಾಟಕಲ್ಲೇ ಮೊದಲಬಾರಿಗೆ 'ಜಾನಪದ ವಸ್ತುಸಂಗ್ರಹಾಲ'ಯವನ್ನು ಸ್ಥಾಪಿಸಿ ಜಾನಪದ ಅಧ್ಯಯನಕ್ಕೆ ತಳಹದಿಯನ್ನು ರೂಪಿಸಿಕೊಟ್ಟಿದ್ದು ಅವರ ಮುಖ್ಯವಾದ ಸಾಧನೆಗಳಲ್ಲಿ ಒಂದು.

ಕರ್ನಾಟಕ ವಿಶ್ವವಿದ್ಯಾನಿಲಯ 1975 ರಲ್ಲಿ ಅವರಿಗೆ ಗೌರವ ಡಾಕ್ಟರೇಟ್ ಪುರಸ್ಕಾರ ನೀಡಿ ಗೌರವಿಸಿದೆ. ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ, ಪಂಪ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ತಿರುವನಂತಪುರದ 'ದ್ರಾವಿಡಿಯನ್ ಲಿಂಗ್ವಿಸ್ಟಿಕ್ಸ್ ಅಸೋಶಿಯೇಶನ್'ನ ಸೀನಿಯರ್ ಫೆಲೋ ಪ್ರಶಸ್ತಿ ಅವರು ಪಡೆದ ಹಲವಾರು ಅನೇಕ ಪ್ರಶಸ್ತಿ ಪುರಸ್ಕಾರಗಳಲ್ಲಿ ಕೆಲವು. 'ಅಂತಃಕರಣ', 'ರಸಷಷ್ಠಿ', 'ದೇಜಗೌ– ವ್ಯಕ್ತಿ ಮತ್ತು ಸಾಹಿತ್ಯ', 'ಅಪೂರ್ವ' ಮತ್ತು 'ನಮ್ಮ ನಾಡೋಜ'ಗಳು ಅವರಿಗೆ ಸಂದಿರುವ ಅಭಿನಂದನ ಗ್ರಂಥಗಳು. ಅ

*ಬಾಲಕೃಷ್ಣ ನಾಯ್ಕ್ ಡಿ.*



**ದೇಜಗೌ ಕೃತಿಗಳು**

**ಸಾಹಿತ್ಯ :** ನಯಸೇನನ 'ಧರ್ಮಾಮೃತ ಸಂಗ್ರಹ', 1957, ಲಕ್ಷ್ಮೀಶನ 'ಜೈಮಿನೀ ಭಾರತ', 1959, ಕನಕದಾಸರ 'ನಳಚರಿತ್ರೆ', 1965, ಆಂಡಯ್ಯನ 'ಕಬ್ಬಿಗರ ಕಾವ', 1964, ಚಿಕ್ಕುಪಾಧ್ಯಾಯನ 'ರುಕ್ಮಾಂಗದ ಚರಿತ್ರೆ', 1982, ನೇಮಿಚಂದ್ರನ 'ಲೀಲಾವತೀ ಪ್ರಬಂಧ', ಹೋರಾಟದ ಬದುಕು (ಆತ್ಮಕಥೆ), ಮೋತಿಲಾಲ್ ನೆಹರೂ, ರಾಷ್ಟ್ರಕವಿ ಕುವೆಂಪು, ತೀನಂಶ್ರೀ, ರಾಮಾಯಣ ದರ್ಶನಂ ವಚನ ಚಂದ್ರಿಕೆ

**ಜಾನಪದ :** 'ಜಾನಪದ ಅಧ್ಯಯನ', 1976, 'ಜಾನಪದ ಸೌಂದರ್ಯ', 1977, 'ಜಾನಪದ ವಾಹಿನಿ', 1983, 'ಜನಪದ ಗೀತಾಂಜಲಿ', 1978, (ಸಂಪಾದಿತ ಕೃತಿ)

**ಭಾಷಾಂತರಗಳು :** 'ಹಮ್ಮು ಮತ್ತು ಬಿಮ್ಮು' (ಜೇನ್ ಆಸ್ಟಿನ್ ಅವರ ಪ್ರೈಡ್ ಅಂಡ್ ಪ್ರಿಜುಡೀಸ್), 'ನೆನಪು ಕಹಿಯಲ್ಲ', (ಕೃಷ್ಣಾ ಹಥೀಸಿಂಗ್ ಅವರ ವಿತ್ ನೋ ರಿಗ್ರೆಟ್ಸ್), 'ಆನಾ ಕೆರಿನಿನಾ' (ಲಿಯೋ ಟಾಲ್ ಸ್ಟಾಯ್ ಅವರ ಕಾದಂಬರಿ), 'ಯುದ್ಧ ಮತ್ತು ಶಾಂತಿ', (ಲಿಯೋ ಟಾಲ್ ಸ್ಟಾಯ್ ಅವರ ವಾರ್ ಅಂಡ್ ಪೀಸ್), 'ಪುನರುತ್ಥಾನ' (ಲಿಯೋ ಟಾಲ್ ಸ್ಟಾಯ್ ಅವರ ರಿಸರೆಕ್ಷನ್).

# ಹುಟ್ಟು-ಸಾವಿನ ಮರ್ಮ!

ಹುಟ್ಟುವುದು ಸಾಯುವುದು ಎಲ್ಲಾ
ಜೀವರಾಶಿಗಳಿಗೊಂದು ನಿರಂತರ-ಅನಿವಾರ್ಯ
ಕರ್ಮ, ಈ ಹುಟ್ಟು ಸಾವುಗಳ ನಡುವೆ
ಬದುಕಿ ಬಾಳುವುದು ವಿಚಿತ್ರ ಪರಿಕ್ರಿಯೆ.

ಬರುವಾಗ ಬರಿಗೈಲೇ ಬಂದು
ಬದುಕಿನುದ್ದಕ್ಕೂ ಕೈತುಂಬಾ ಸಂಪಾದಿಸುವ
ಆಸೆ ಹೋರಾಟ, ಕೊನೆಗೊಂದು ದಿನ
ಹೋಗುವಾಗ ಮತ್ತೆ ಬರಿ ಗೈಲೇ ವಾಪಾಸ್ಸು

'ಬಂದ ಹಾದಿಗೆ ಸುಂಕವಿಲ್ಲ' ಎಂಬಂತೆ
ದುಡಿದು ಗಳಿಸಿದ್ದನ್ನೆಲ್ಲಾ ಇಲ್ಲೇ ಬಿಟ್ಟು
ಎಲ್ಲಿಂದಲೋ ಬಂದವರು ಅದೆಲ್ಲಿಗೋ
ಹೋಗಿಬಿಡುತ್ತೇವೆ ಮರ್ಮವರಿಯದೆ.

*ಸಖಾರಾಮ ಉಪ್ಪೂರು*

# ಗೆಳೆಯ ನಿನಗೆ ಶುಕ್ರಿಯಾ

ಕಾಮನಬಿಲ್ಲನ್ನು ತೋರಿಸಿ
ಭೂಮಿಯ ಆಳದಲ್ಲಿ ಇಳಿಸಿದ
ಗೆಳೆಯ ನಿನಗೆ ಶುಕ್ರಿಯಾ ।

ಪ್ರೀತಿಯೆಂಬ ಹೂವನ್ನು ಅರಳಿಸಿ
ಮರೆಯಲಾರದ ನೋವನ್ನು ಕೊಟ್ಟ
ಗೆಳೆಯ ನಿನಗೆ ಶುಕ್ರಿಯಾ ।

ಮುತ್ತಿನ ಮಾತಿನಲಿ ತೇಲಾಡಿಸಿ
ತುತ್ತು ತುತ್ತು ನನ್ನದು ಎಂದ
ಗೆಳೆಯ ನಿನಗೆ ಶುಕ್ರಿಯಾ ।

ನಾನು ನಿನ್ನವಳಾಗಬೇಕೆಂದು ಬಯಸಿ
ನೀನೂ ನನ್ನವನ್ನೆಂಬುದನ್ನೇ ಮರೆತ
ಗೆಳೆಯ ನಿನಗೆ ಶುಕ್ರಿಯಾ ।

*ಸವಿತಾ ನೆಲ್ಲಿ*

# ಕವಿತೆ ಅಲ್ಲ-ನೈಜತೆ

ಸಾವಿರುವವರೆಗೂ ಗಿಡಮರಗಳೋ
ತರುಲತೆಗಳಿರುವವರೆಗೂ ನಾವೋ
ತಾವೇ ಬೆಳೆಯುತ್ತಾ ಪರಿಸರವನ್ನು
ಸ್ವಚ್ಛಗೊಳಿಸುವ ಜೀವಿಗಳು
ಅವು ಎತ್ತರದ ಮರಗಳು; ನಳ ನಳಿಸುವ ಗಿಡಗಳು!
ಪ್ರತಿ ಎಲೆಯೂ ವಿಷಾನಿಲ ಕುಡಿಯುತ್ತಾ
ಮಾನವ-ಪ್ರಾಣಿಗಳು ಉಸುರಾಡಲು
ಪರಿಶ್ರಮಪಡುವ ಆ ಉದ್ದಂತ ಮರಗಳು.
ಅಷ್ಟೇ ಏಕೆ ನಮಗಾಗಿ ತಮ್ಮ ಉಸಿರಿನಿಂದ
ಮೋಡಕಟ್ಟಿ ಮಳೆ ಸುರಿಸಲು ಬೆವರು ಸುರಿಸುತ್ತಿರುವ
ಗಿಡಮರಗಳು
ಅವಿಲ್ಲದೇ ಈ ಭೂಖಂಡ ಇರುವುದುಂಟೇ
ಹಸಿರುಡಿಗೆ ಉಟ್ಟು ಅನ್ನ ಉಣಿಸಿದ ಭೂಮಾತೆ
ಇಂದು ಅಲ್ಲಲ್ಲಿ ಹರಿದ ಮಸುಕು ಬಣ್ಣದ ಉಡಿಗೆ ತೊಟ್ಟು
"ಏನು ಮಾಡಲಿ-ಎತ್ತ ಹೋಗಲಿ ಯಾರನ್ನು ಕೂಗಿ
ಕಾಪಾಡಿ ಕಾಪಾಡಿ ಎಂದು ಕೂಗಲಿ" ಎನ್ನುತ್ತಾ ದುಃಖದ
ಕಡಲಲ್ಲಿ ಮುಳುಗಿ ದಿನದಿನವೂ ಸೊರಗುತ್ತಿದ್ದಾಳೆ.
ಹುಟ್ಟುವಾಗ ಬರಿಕೈಲಿ ಬಂದು ಕೈಕೊಡವಿದರಾಯಿತೇ?
ಇಲ್ಲ ಹಾಗಾಗಕೂಡದು. ಹೇಗೆ ಯಾರು ಎಚ್ಚೆತ್ತುಕೊಳ್ಳಬೇಕು?
ಉದ್ದಗಲ ರಸ್ತೆ ಬೇಕೆಂಬುದಕ್ಕಾಗಿ ಸಾವಿರಾರು ಮರಗಳನು
ಚರಚರನೆ ಬಲಿ ಕೊಟ್ಟು ಉರುಳಿಸಿ ಉದ್ದಗಲ ರಸ್ತೆ ಮಾಡಿದವರಾರು
ನಾಳೆ ನಾವೇ ಮೋಜಿನ ಓಟದ ಕಾರಿನಿಂದ ಕುಚಲಿಸಿ
ಸಾಲು ಸಾಲಾಗಿ ನಿಶ್ಚೇತವಾಗಿ ಬಿದ್ದಿರುತ್ತೇವೆ.
ಅಯ್ಯೋ ಕರ್ಮ ಕರ್ಮ ಎಂದು ಎಲ್ಲೆಡೆ ಅರುಚಾಟ.
ಸುವರ್ಣ ಮೃಗದ ಹಿಂದೆ ಓಡುತ್ತಾ
ಬೇಟೆ ಆಡಿ ಮರೀಚಿಕೆಯಲ್ಲಿ ಕೈ ತೊಳೆಯುವ ಧಾವಂತೆ!
ಆಗಿದೆ ಜೀವನ ಇಂದು ಆಗಿದೆ ಅಸಂತುಲನ.
"ಬಿದ್ದುದನ ನಿಲ್ಲಿಪುದೇ ನರನ ಮೃತ್ಯುಂಜಯತೆ" ಎಂಬ
ಡಿ.ವಿ.ಜಿ.ಯವರ ವಿಶ್ವನುಡಿ ಕೇಳಿಸುತ್ತಿದೆಯೇ
ಎಲ್ಲಿ? ಎಲ್ಲಿ?

*ಡಾ. ಅಹಲ್ಯಾಚಿಂತಾಮಣಿ*

# ರೈತರ ಸಬಲತೆಗೆ ಕೃಷಿ ಕುರಿತು ರಾಷ್ಟ್ರೀಯ ಚರ್ಚೆ




"ರೈತರ ಆರ್ಥಿಕ ಮತ್ತು ಸಾಮಾಜಿಕ ಸಬಲತೆಗೆ ಸುಸ್ಥಿರ ಕೃಷಿ" ಎಂಬ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ದೆಹಲಿ ಒಕ್ಕಲಿಗ ಗೌಡ ಸಂಘವು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ ಮೇ 7ರಂದು ನಡೆಸಿತು. ಇದೇ ಸಂದರ್ಭದಲ್ಲಿ ನೂತನ ಶಾಸಕರು ಹಾಗೂ ಕೃಷಿ ಸಾಧಕರಿಗೆ ಸನ್ಮಾನವನ್ನು ಮಾಡಲಾಯಿತು. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀಶ್ರೀಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಸಾನಿಧ್ಯದಲ್ಲಿ ಈ ಕಾರ್ಯಕ್ರಮದ ಉದ್ಘಾಟನೆಯಾಯಿತು. ಇಂತಹ ಯಶಸ್ವಿ ಕಾರ್ಯಕ್ರಮ ಮಾಡಲು ಸಂಘದ ಪದಾಧಿಕಾರಿಗಳು ದೆಹಲಿಯಿಂದ ಒಂದು ತಿಂಗಳು ಮೊದಲೇ ಬೆಂಗಳೂರಿಗೆ ತೆರಳಿ ವಿಶ್ರಾಂತ ಉಪಕುಲಪತಿಗಳಾದ ಡಾ. ಕೆ. ನಾರಾಯಣ ಗೌಡ, ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಎಚ್.ಡಿ. ದೇವೇ ಗೌಡ, ರಾಜ್ಯ ಸಭಾ ಸದಸ್ಯರಾದ ಡಾ. ರಾಜೀವ್ ಗೌಡ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾದ ಡಾ. ಅಪ್ಪಾಜಿ ಗೌಡ ಸೇರಿದಂತೆ ಇನ್ನೂ ಮುಂತಾದ ಕೃಷಿ ತಜ್ಞರು, ಪಂಡಿತರು, ಜನನಾಯಕರನ್ನು ಭೇಟಿ ಮಾಡಿ ಅವರ ಸಲಹೆ ಸಹಕಾರವನ್ನು ಕೇಳಿ ಕಾರ್ಯಕ್ರಮವನ್ನು ರೂಪಿಸಲಾಗಿತ್ತು.

ರಾಜ್ಯಸಭಾ ಸದಸ್ಯರಾದ ಪ್ರೊ. ಎಂ.ವಿ. ರಾಜೀವ್ ಗೌಡ ಅವರು ಮಾತಾಡುತ್ತಾ ಪ್ರಾಸ್ತಾವಿಕ ಭಾಷಣದೊಂದಿಗೆ ಕೋಲಾರ ಜಿಲ್ಲೆಯ ಸುತ್ತಮುತ್ತಲಿನ ರೈತರ ಜೀವನ, ಬೇಸಾಯ ಪದ್ಧತಿಯನ್ನು ವಿವರಿಸಿದರು. ಮಂಡ್ಯಜಿಲ್ಲೆಯ ಬಹುತೇಕ ತಾಲ್ಲೂಕುಗಳು ನೀರಾವರಿ ಪ್ರದೇಶವಾಗಿದೆ. ಆದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ದುರಾದೃಷ್ಟಕರ. ಕೋಲಾರ ಜಿಲ್ಲೆಯ ರೈತರು ನೀರಿಗಾಗಿ ಒಂದೂವರೆ ಸಾವಿರ ಅಡಿ ಬೋರ್‌ವೆಲ್ ಕೊರೆಸುತ್ತಾರೆ. ಮಳೆಯನ್ನೇ ನಂಬಿರುವ ಈ ಜನ ಹಣ್ಣು, ತರಕಾರಿ ಇವೇ ಮುಂತಾದವುಗಳನ್ನು ಬೆಳೆಯುವುದರ ಮೂಲಕ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಇಲ್ಲಿಯ ತನಕ ಈ ಭಾಗದ ಒಬ್ಬನೇ ಒಬ್ಬ ರೈತನ ಆತ್ಮಹತ್ಯೆಯಾದ ಉದಾಹರಣೆ ಇಲ್ಲ ಎಂದು ಹೇಳಿದರು.

ವಿಶ್ರಾಂತ ಉಪಕುಲಪತಿಗಳಾದ ಡಾ. ಕೆ. ನಾರಾಯಣ ಗೌಡ ಅವರು ಮಾತನಾಡುತ್ತ ಕೃಷಿ ಪಂಡಿತರು, ಕೃಷಿ ವಿಜ್ಞಾನಿಗಳು ಮಾಡಿರುವ ಸಾಧನೆ, ಹೊಸ ನಮೂನೆಯ ಯಂತ್ರಗಳ ಆವಿಷ್ಕಾರ, ಹಸಿರು ಕ್ರಾಂತಿಯ ಲಾಭ-ನಷ್ಟಗಳು, ಕುಕ್ಕುಟ ಉದ್ಯಮದ ಲಾಭಗಳನ್ನು ತಿಳಿಸಿದರು. ರೈತರು ಕೃಷಿಯ ಜೊತೆ, ಜೊತೆಗೆ ಹೈನುಗಾರಿಕೆ, ತೋಟಗಾರಿಕೆ, ಕುಕ್ಕಟ ಉದ್ಯಮ, ಕುರಿ ಸಾಕಾಣಿಕೆ ಇವೇ ಮುಂತಾದವುಗಳಿಂದ ಲಾಭ ಗಳಿಸಬಹುದು. ಕಬ್ಬು ಕೇವಲ ವಾಣಿಜ್ಯ ಬೆಳೆ. ಅದನ್ನೇ ನಂಬಿದರೆ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ ಎಂದು ರೈತರ ಮನಮುಟ್ಟುವಂತೆ ನುಡಿದರು.

ಶಾಸಕರಾದ ಶ್ರೀ ವೈ. ಎ. ನಾರಾಯಣ ಸ್ವಾಮಿಯರು ಕರ್ನಾಟಕದಲ್ಲಿರುವ ಜಲಾಶಯಗಳ ನೀರಿನ ಶೇಖರಣಾ ಮಟ್ಟ ಜಲಾಶಯಗಳ ಒಳ-ಹೊರ ಹರಿವುಗಳನ್ನು ತಿಳಿಸಿಕೊಟ್ಟು ರೈತರ ಹಾಗೂ ಕೃಷಿ ಪಂಡಿತರ ಉಬ್ಬೇರುವಂತೆ ಮಾಡಿದರು.

ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಬಿ. ಕೃಷ್ಣ ಅವರು ರೈತರು ತಾವು ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ಸಾಗಿಸುವುದು, ಪ್ರಮಾಣ ಪತ್ರಕ್ಕಾಗಿ ಪರದಾಡಬೇಕು. ಒಂದೊಂದು ದಿಕ್ಕಿನಲ್ಲಿ ಒಂದೊಂದು ಕಛೇರಿ ಇರುವುದು ಅಂತಿಮವಾಗಿ ರೈತರ ಹಣ್ಣು ತರಕಾರಿ ಒಣಗಿಹೋಗಿ ಕಸದ ರಾಶಿಗೆ ಸೇರುವ ಪರಿಯನ್ನು ಬಿಡಿಸಿಟ್ಟರು. ಸರ್ಕಾರಿ ಅಧಿಕಾರಿಗಳಿಗೆ ಇವೆಲ್ಲ ತಿಳಿದಿದ್ದರೂ ಕಿಂಚಿತ್ತೂ ರೈತರ ಬಗ್ಗೆ ಕಾಳಜಿ ತೋರದ ಅಧಿಕಾರಿಶಾಹಿಗಳ ವರ್ತನೆಯನ್ನು ತಾವು ಕಂಡು, ಕೇಳಿ ತಮ್ಮ ಅನುಭವವನ್ನು ತಿಳಿಸಿ ರೈತರ ಮನಗೆದ್ದರು.

ಯುವ ನಾಯಕ ಶ್ರೀ ಎಸ್. ಪ್ರಸನ್ನ ಇವರು ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರು ಹಾಗೂ ಅಧ್ಯಕ್ಷರು, ಜನಚೇತನ ಟ್ರಸ್ಟ್ ಮೈಸೂರು ಇವರು ಮಾತನಾಡುತ್ತಾ ತಾನು ಚಿಕ್ಕವನಿರುವಾಗ ಮನೆಗೆ ಸೋಪು, ಪೇಸ್ಟ್, ಹೊರತುಪಡಿಸಿ ಎಲ್ಲಾ ವಿಧವಾದ ತರಕಾರಿ, ಹಣ್ಣುಗಳು, ಸೊಪ್ಪು, ದವಸಧಾನ್ಯಗಳನ್ನು ನಾವೇ ಬೆಳೆದುಕೊಳ್ಳುತ್ತಿದ್ದೆವು. ಇತ್ತೀಚಿನ ದಿನಗಳಲ್ಲಿ ಹಳ್ಳಿಯಲ್ಲಿ ಹಾಲು, ಅಕ್ಕಿ, ರಾಗಿ, ಬಾಯ್ಲರ್ ಕೋಳಿ ಸೇರಿದಂತೆ ಎಲ್ಲವನ್ನೂ ಕೊಂಡು ತಿನ್ನುತ್ತಿದ್ದಾರೆ. ಸಾವಯವ ಕೃಷಿ ಮರೆತಿದ್ದಾರೆ. ಕೃತಕ ಗೊಬ್ಬರದ ಮೊರೆ ಹೋಗುತ್ತಿದ್ದಾರೆ. ಮಣ್ಣಿನ ಫಲವತ್ತತೆ ಕಡಿಮೆಯಾಗಿ ಅದು ಇಳುವರಿ ಖೋತಾ ಆಗಲು ಕಾರಣವಾಗುತ್ತದೆ. ಮೈಸೂರು ಪ್ರಾಂತ್ಯದಲ್ಲಿ ರೈತರನ್ನು ಕೃಷಿಯ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ 'ಜನಚೇತನ ಟ್ರಸ್ಟ್' ಪ್ರಾರಂಭಿಸಲಾಗಿದೆ ಎಂದು ಹೇಳಿದರು.

ಮಂಡ್ಯ ಜಿಲ್ಲಾ ಲೋಕಸಭಾ ಸದಸ್ಯರಾದ ಶ್ರೀ ಸಿ.ಎಸ್. ಪುಟ್ಟರಾಜು ಅವರು ಮಾತನಾಡುತ್ತಾ ಚಿಕ್ಕವನಿದ್ದಾಗ ಮುಂಜಾನೆ ಐದು ಗಂಟೆಗೆ ಎದ್ದು ಕೊಟ್ಟಿಗೆ ಕಸ ಗುಡಿಸುವುದು, ದನಕರುಗಳನ್ನು ಹೊರಗೆ ಕಟ್ಟಿಹಾಕುವುದು. ಸೆಗಣಿಯನ್ನು ತಿಪ್ಪೆಗೆ ಸುರಿದು ಸ್ವತಃ ಕೊಟ್ಟಿಗೆ ಗೊಬ್ಬರ ತಯಾರಿಸಿಕೊಳ್ಳುತ್ತಿದ್ದೆವು. ಎಲ್ಲಾ ಕೆಲಸ ಮುಗಿಸಿಕೊಂಡು ಶಾಲೆಗೆ ಹೋಗುತ್ತಿದ್ದೆವು. ಇತ್ತೀಚಿನ ದಿನಗಳಲ್ಲಿ ಶ್ರಮವಹಿಸಿ ಕೆಲಸ ಮಾಡಲು ಯಾರೂ ತಯಾರಿಲ್ಲ ಎಂದು ಹೇಳಿದರು.

ಕೃಷಿ ಪಂಡಿತರಾದ ಡಾ. ಆರ್. ಆರ್. ಅಂಚಿನಾಳರವರು ಅರಿಶಿನ, ಬೇವು, ಸುವಾಸನೆಯುಳ್ಳ ಬಾಸ್ಮತಿ ಅಕ್ಕಿ ಸೇರಿದಂತೆ ಹಲವಾರು ವಿಧದ ಭತ್ತದ ತಳಿಗಳು ನಮ್ಮ ಭಾರತೀಯರದು. ವಿದೇಶಿಯರು ಇವುಗಳ ಮೇಲೆ ಪೇಟೆಂಟ್ ತೆಗೆದುಕೊಂಡಿದ್ದಾರೆ. ಒಂದೊಮ್ಮೆ ನಾಗರಹಾವು ಕಚ್ಚಿದರೂ ಅದರಿಂದ ಜೀವರಕ್ಷಣೆ ಮಾಡಿಕೊಳ್ಳುವಂತಹ ಭತ್ತದ ತಳಿ ನಮ್ಮಲ್ಲಿದೆ ಎಂದು ಹೇಳಿದರು.



ಕಿಸಾನ್ ಮಜ್ದೂರ್ ಸಂಘದ ಅಧ್ಯಕ್ಷ (ಉತ್ತರಪ್ರದೇಶ)ರಾದ ಶ್ರೀ ವಿ.ಎನ್. ಸಿಂಗ್‌ರವರು ಮಾತನಾಡಿ ಉತ್ತರ ಪ್ರದೇಶದ ರೈತರ ಬವಣೆಯನ್ನು ಪ್ರಸ್ತಾಪಿಸಿದರು. ಪಂಜಾಬ್‌ನ ರೈತನಂತೆ ಸುಖವಾಗಿರಲು ಸಾಧ್ಯವಿಲ್ಲ ಎಂದು ನುಡಿದರು.

ವಿಚಾರ ಸಂಕಿರಣದ ಕೊನೆಯ ಘಟ್ಟದಲ್ಲಿ ಶ್ರೀ ನಿರ್ಮಲಾನಂದ ಸ್ವಾಮೀಜಿಗಳು ರೈತನ ಕಷ್ಟಸುಖಗಳನ್ನು ಸರ್ಕಾರದ ಹಾಗೂ ಜನಪ್ರತಿನಿಧಿಗಳ ಪಾತ್ರವನ್ನು ಕುರಿತು ಒತ್ತಿ ಹೇಳಿದರು. ಇತ್ತೀಚಿನ ದಿನಗಳಲ್ಲಿ ಗ್ರಾಮಗಳಿಂದ ಪಟ್ಟಣಕ್ಕೆ ವಲಸೆ ಹೋಗುತ್ತಿರುವುದು ವಿಷಾದನೀಯ ಎಂದು ಹೇಳಿದರು.

ಈ ವಿಚಾರ ಸಂಕಿರಣಕ್ಕೆ ಮಂಡ್ಯ, ಮೈಸೂರು, ಕೆ.ಆರ್. ನಗರ, ಪಿರಿಯಾಪಟ್ಟಣ, ರಾಮನಗರ ಸೇರಿದಂತೆ ಹಲವಾರು ಕಡೆಗಳಿಂದ ಬಂದಿದ್ದರು. ವಿಶೇಷವೆಂದರೆ ಕನ್ನಡ ಬಾರದ ಉತ್ತರ ಪ್ರದೇಶದ ಕಿಸಾನ್ ಮೋರ್ಚಾದ ರೈತರೂ ಕೂಡ ಕೊನೆಯವರೆಗೆ ಕುಳಿತು ವಿಚಾರ ಸಂಕಿರಣದ ಭಾಷಣಗಳನ್ನು ಕೇಳಿಸಿಕೊಂಡರು.

ನೂತನವಾಗಿ ಆಯ್ಕೆಯಾದ ಶಾಸಕರಿಗೆ ಹಾಗೂ ಉತ್ತಮ ಕೃಷಿಕರಿಗೆ ಸನ್ಮಾನ ಮಾಡಲಾಯಿತು. ವಿಚಾರ ಸಂಕಿರಣದ ನಂತರ ಶ್ರೀ ಕುವೆಂಪು ಅವರ ಗೀತೆಗಳ ಗಾಯನದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾದ ಡಾ. ಕೆ.ಎಸ್. ಸೋಮಶೇಖರ್ ಅವರು ವಿದ್ಯುಕ್ತವಾಗಿ ಎಲ್ಲರನ್ನು ಸ್ವಾಗತಿಸಿದರು.

ಇಂತಹ ವಿಚಾರ ಸಂಕಿರಣ ದೂರದ ದೆಹಲಿಯಲ್ಲಿ ಮಾತ್ರವಲ್ಲ ರಾಜ್ಯದ ಎಲ್ಲಾ ಕಡೆಗಳಲ್ಲಿ ಇಂತಹ ವಿಚಾರ ಸಂಕಿರಣ ನಡೆಯಬೇಕು. ರೈತರಿಗೆ ಮಾರ್ಗದರ್ಶಿಯಾಗಬೇಕು. ಈ ಅರ್ಥಪೂರ್ಣ ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರನ್ನೂ ದೆಹಲಿ ಒಕ್ಕಲಿಗ ಗೌಡದ ಕಾರ್ಯದರ್ಶಿ ಯವರಾದ ಪಿ.ಸಿ. ಶ್ರೀನಿವಾಸ ಅವರು ವಂದಿಸಿದರು. ಅ

***ಡಾ. ಬಿ. ಪಾಂಡು ಕುಮಾರ್***

# ದೆಹಲಿ ಕನ್ನಡ ಶಾಲೆಯಲ್ಲಿ ಕಬಡ್ಡಿ ಪಂದ್ಯಾಟ



ದೆಹಲಿಯ ಮುಖ್ಯಮಂತ್ರಿ ಶ್ರೀ ಅರವಿಂದ ಕೇಜ್ರಿವಾಲ್ ಅವರು ದೆಹಲಿ ಕನ್ನಡ ಶಾಲೆಗೆ ಆಗಮಿಸಿ ದೆಹಲಿ ಸರ್ಕಾರದ ಕ್ರೀಡಾ ವಿಭಾಗ ಮತ್ತು ಸ್ಟಾರ್ ಸ್ಪೋರ್ಟ್ಸ್ ಸಹಯೋಗದೊಂದಿಗೆ ಶಾಲೆಯ ಮೈದಾನದಲ್ಲಿ ಇದೇ ಮೇ 3ರಂದು ನಡೆದ ಅಂತರ್‌ಶಾಲಾ ಕಬಡ್ಡಿ ಪಂದ್ಯಾಟದಲ್ಲಿ ಭಾಗವಹಿಸುತ್ತಿರುವ ತಂಡಗಳಿಗೆ ಶುಭ ಹಾರೈಸಿದರು.

ತಮ್ಮ ನವದೆಹಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ದೆಹಲಿ ಕನ್ನಡ ಶಾಲೆಗೆ ಆಗಮಿಸಿದ ಶ್ರೀ ಕೇಜ್ರಿವಾಲ್ ಮತ್ತು ಡೆಪ್ಯುಟಿ ಡೈರೆಕ್ಟರ್ ಆಫ್ ಎಜ್ಯುಕೇಶನ್ ಶ್ರೀಮತಿ ವಿನೀತಾ ಶಂಕರ್ ಅವರನ್ನು ದೆಹಲಿ ಕನ್ನಡ ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಡಾ. ವಿ.ಆರ್. ಗುಡ್ಡೇಗೌಡ ಹಾಗೂ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಅವರು ಪುಷ್ಪಗುಚ್ಛಗಳನ್ನು ನೀಡಿ ಸ್ವಾಗತಿಸಿದರು. ಆ ಸಂದರ್ಭದಲ್ಲಿ ದೆಹಲಿ ಕನ್ನಡ ಶಾಲೆಯ ಅಧ್ಯಾಪಕ, ಅಧ್ಯಾಪಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಜತೆಗಿದ್ದರು.

ದೆಹಲಿಯ ವಿವಿಧ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸುವ ಸಲುವಾಗಿ ವಿವಿಧ ಶಾಲೆಗಳ ಮೈದಾನಗಳಲ್ಲಿ ಕಬಡ್ಡಿಯಂತಹ ಕ್ರೀಡೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಈ ಪಂದ್ಯಾಟಗಳನ್ನು ನಡೆಸಲಾಗುತ್ತದೆ. ಪಂದ್ಯಗಳಲ್ಲಿ ಸುಮಾರು 28 ಶಾಲೆಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರ ತಂಡಗಳು ಭಾಗವಹಿಸಿದ್ದರು. ಪ್ರಾರಂಭದಲ್ಲಿ ದೆಹಲಿ ಕನ್ನಡ ಶಾಲೆಯ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಅವರು ಕಬಡ್ಡಿ ಪಂದ್ಯಾಟಗಳನ್ನು ಉದ್ಘಾಟಿಸಿ ಭಾಗವಹಿಸುತ್ತಿರುವ ತಂಡಗಳಿಗೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ದೆಹಲಿ ಸರ್ಕಾರದ ಶಿಕ್ಷಾ ವಿಭಾಗದ 26ನೇ ವಲಯದ ಅಧಿಕಾರಿಗಳೂ ಉಪಸ್ಥಿತರಿದ್ದರು. ಅತಿಥೇಯ ದೆಹಲಿ ಕನ್ನಡ ಶಾಲೆಯ ವಿದ್ಯಾರ್ಥಿಗಳು 14ವರ್ಷದ ಕೆಳಗಿನ ವಿದ್ಯಾರ್ಥಿಗಳ ವಿಭಾಗದ ಕಬಡ್ಡಿಯಲ್ಲಿ ಹುರುಪಿನಿಂದ ಆಡಿ ಜಯಶೀಲರಾದರು. ಇವರಿಗೆ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಶಿವರಾಮ್ ಹಾಗೂ ಕು. ಡೆರಿಲ್ ಜೆಸಿಕಾ ಸತತವಾಗಿ ತರಬೇತಿ ನೀಡಿದರು. ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಅವರು ಬೆಂಬಲ ಮತ್ತು ಪ್ರೋತ್ಸಾಹ ನೀಡಿದರು. ಅ

**ಪ್ರೇಮಲತಾ**

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಜೂನ್, 2016ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಜೂನ್ 2016ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 26 ಜೂನ್, 2016ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 26 ಜೂನ್, 2016ರಂದು ಸಾಯಂಕಾಲ 4 ಗಂಟೆಯಿಂದ.

ಸ್ಥಳೀಯ ಕನ್ನಡದ ಪತ್ರಿಭೆಗಳಿಂದ ಜುಲೈ 24, ಅಗಸ್ಟ್ 20, ಮತ್ತು ಸೆಪ್ಟಂಬರ್ 25ರಂದು ಆಯೋಜಿಸುವ ಕನ್ನಡದ ರಸಮಂಜರಿ ಕಾರ್ಯಕ್ರಮಕ್ಕೆ ಟ್ರ್ಯಾಕ್ ಮೇಲೆ ಹಾಡಲು ಮತ್ತು ಬಹುಭಾಷಾ ನೃತ್ಯ ಮತ್ತು ಬಹುಭಾಷಾ ಹಾಡುಗಳ ಕಾರ್ಯಕ್ರಮಕ್ಕೆ (ದಿನಾಂಕ ನಿಗದಿಯಾಗಿಲ್ಲ) ತಮಗಿಷ್ಟವಾದ ಯಾವುದೇ ಭಾಷೆಯಲ್ಲಿ ಕಾರ್ಯಕ್ರಮಗಳನ್ನು ನೀಡಬಹುದಾಗಿದೆ. (ಮುಖ್ಯವಾಗಿ ಇಂಗ್ಲೀಷ್, ಹಿಂದಿ ಮತ್ತು ಕರ್ನಾಟಕದ ಪ್ರಾದೇಶಿಕ ಭಾಷೆಗಳು) ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಹೆಸರನ್ನು ಸಂಘದಲ್ಲಿ ನೊಂದಾಯಿಸಬೇಕು.

## ದೆಹಲಿ ಕನ್ನಡ ಶಾಲೆಯಲ್ಲಿ ಉತ್ತಮ ಸಿ.ಬಿ.ಎಸ್.ಇ. ಫಲಿತಾಂಶ

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯು ಪ್ರಸಕ್ತ ಸಾಲಿನ ಸಿ.ಬಿ.ಎಸ್.ಇ. 10ನೇ ತರಗತಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶವನ್ನು ದಾಖಲಿಸಿದೆ. ಪರೀಕ್ಷೆಗೆ 64 ವಿದ್ಯಾರ್ಥಿಗಳು ಹಾಜರಾಗಿದ್ದು ಎಲ್ಲಾ ವಿದ್ಯಾರ್ಥಿಗಳು ಉತ್ತಮ ಗ್ರೇಡ್ ಪಾಯಿಂಟ್ ಪಡೆದು 100% ದಾಖಲಿಸಿದ್ದಾರೆ. ತೌಸಿಫ್ ಆಲಿ ಖಾನ್ 10 ಗ್ರೇಡ್ ಪಾಯಿಂಟ್, ಸಿ. ಪುನೀತ್ ಮತ್ತು ಮಧುರ್ ತ್ರಿಪಾಠಿ 9.6 ಗ್ರೇಡ್ ಪಾಯಿಂಟ್ ಹಾಗೂ ಎಸ್. ಚೌಹಾಣ್, ದೀಪಾಂಶು ಶರ್ಮ 9.4 ಗ್ರೇಡ್ ಪಾಯಿಂಟ್ ಪಡೆದಿದ್ದಾರೆ.

ಹಾಗೆಯೇ 12ನೇ ತರಗತಿಯ ಕೂಡಾ ಈ ಸಾಲಿನಲ್ಲಿ ಶೇ. 99 ಫಲಿತಾಂಶವನ್ನು ದಾಖಲಿಸಿದೆ. ವಿಜ್ಞಾನ ವಿಭಾಗದಲ್ಲಿ ಹರಿಕೃಷ್ಣನ್ ಪಿ. 94.4%, ವಾಣಿಜ್ಯ ವಿಭಾಗದಲ್ಲಿ ವಿಕಾಸ್ ಕುಮಾರ್ ಸಿಂಗ್ 87%, ಕಲಾ ವಿಭಾಗದಲ್ಲಿ ಕುಮಾರಿ ಶ್ವೇತಾ ಜಿ 80% ಅಂಕವನ್ನು ಪಡೆದಿದ್ದಾರೆ. ಇವರು ಆಯಾ ವಿಭಾಗದಲ್ಲಿ ಗರಿಷ್ಠ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಾಗಿದ್ದಾರೆ.

ಫಲಿತಾಂಶದ ಬಗ್ಗೆ ಮಾತನಾಡಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ವಿ.ಆರ್. ಗುಡ್ಡೇಗೌಡ ಅವರು "ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಹೆಸರಾದ ಹಾಗೂ ರಾಜಧಾನಿಯಲ್ಲಿ ಕನ್ನಡ ಭಾಷೆ–ಸಂಸ್ಕೃತಿಯನ್ನು ಪಸರಿಸುವ ಈ ವಿಶಿಷ್ಟ ವಿದ್ಯಾ ಸಂಸ್ಥೆಯು ಕೇವಲ ವಿದ್ಯಾರ್ಥಿಗಳ ಫಲಿತಾಂಶಕ್ಕೆ ಮಾತ್ರ ಪ್ರಯತ್ನಿಸುತ್ತಿಲ್ಲ ಬದಲಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ನಿರಂತರವಾಗಿ ಪ್ರಯತ್ನಿಸುತ್ತಿದೆ. ಈ ಪ್ರಯತ್ನದ ಫಲವೇ ಇಂದಿನ ಫಲಿತಾಂಶ" ಎಂದರು. ವಿದ್ಯಾರ್ಥಿಗಳಿಗೆ ಹಾಗೂ ಅವರನ್ನು ಪ್ರೇರೇಪಿಸಿದ ಶಿಕ್ಷಕರಿಗೆ, ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಕೆ. ಟಿ. ಗಣೇಶ್ ಅವರಿಗೆ ಅಭಿನಂದನೆಯನ್ನು ಕೂಡಾ ಡಾ. ಗುಡ್ಡೇಗೌಡ ಸಲ್ಲಿಸಿದರು.

***ಕೆ. ಟಿ. ಗಣೇಶ್***

# ಓದುಗರ ಅನಿಸಿಕೆ

## ಅಭಿಮತ ಬೆಳ್ಳಿ ಸಂಪುಟದ ವಿಶೇಷ ಸಂಚಿಕೆ

ಕಳೆದ 25ವರುಷಗಳಿಂದ ಪ್ರತಿ ತಿಂಗಳು ಎರಡನೇಯ ವಾರ ಅಭಿಮತಕ್ಕಾಗಿ ಕಾದಿರುತ್ತೇನೆ. ದೆಹಲಿಯಂತಹ ದೊಡ್ಡ ಶಹರಿನಲ್ಲಿ ದೆಹಲಿ ಕರ್ನಾಟಕ ಸಂಘದ ಹಾಗೂ ಕನ್ನಡಿಗರ ಸುದ್ದಿ ಇತ್ಯಾದಿ ತಿಳಿಯಲು 'ಅಭಿಮತ' ಸಹಕಾರಿಯಾಗಿದೆ.

ಬೆಳ್ಳಿ ಸಂಪುಟದ ವಿಶೇಷ ಸಂಚಿಕೆಯನ್ನು ಹೊದಿಕೆಯಿಂದ ಹೊದಿಕೆ ತನಕ ಓದಿದೆ. ಸಿ.ವಿ. ಗೋಪಿನಾಥ್ ಬರೆದ 'ಐವತ್ತು ವರುಷಗಳಲ್ಲಿ ನಾ ಕಂಡು ಅನುಭವಿಸಿದ ಕನ್ನಡ ಸಂಘಗಳು' ಹಾಗೂ ಬಾನಾಡಿಯವರು ಬರೆದ ದೆಹಲಿಯಲ್ಲಿ 'ಕನ್ನಡ ಹುಡುಕುತ್ತಾ' ಲೇಖನಗಳು ಪುನಃ ಪುನಃ ಓದುವಂತಾಗಿದೆ. ಅವರ ಅನುಭವದ ಅನಿಸಿಕೆಗಳು ಅರ್ಥಗರ್ಭಿತವಾಗಿದೆ ಹಾಗೂ ನಮಗೆಲ್ಲರಿಗೂ ಮಾರ್ಗದರ್ಶಿಯಾಗಿದೆ.

ಒಂದು ವಜ್ರದ ಹಾರದಲ್ಲಿ ಯಾವ ವಜ್ರ ಅತೀ ಅಮೂಲ್ಯವಾದುದು ಎಂದು ಹೇಳಲಿಕ್ಕೆ ಕಷ್ಟ. ಹಾರದಲ್ಲಿರುವ ಪ್ರತಿಯೊಂದು ವಜ್ರಗಳು ಅತೀ ಅಮೂಲ್ಯವಾದವುಗಳು. ಹಾಗೆಯೇ ಬೆಳ್ಳಿ ಸಂಪುಟದ ವಿಶೇಷಾಂಕದಲ್ಲಿ ಯಾರ ಲೇಖನ ಒಳ್ಳೆಯದು ಎಂದು ಹೇಳಲು ಅಸಾಧ್ಯ. ಅದರಲ್ಲಿರುವ ಎಲ್ಲಾ ಲೇಖನಗಳು ಓದಿ, ಅರಗಿಸಿ, ಜೀರ್ಣಮಾಡಿ ಸಂತೋಷಪಡುವಂತವು. ಇದಕ್ಕೆ ಕಾರಣ ಬಾನಾಡಿಯವರ ವಿದ್ವತ್ತು. ಒಬ್ಬ ನಾಜೂಕು ಚೇನಿಗಾರ




ಅಮೂಲ್ಯವಾದ ವಜ್ರಗಳನ್ನು ಹೆಕ್ಕಿ, ಪೋಣಿಸಿ ಮಾಡಿದ ಕುತ್ತಿಗೆ ಹಾರದ ಹಾಗೆ ಮಾಡಿದ ಬಾನಾಡಿಯವರಿಗೆ ಅನಂತ ವಂದನೆಗಳು.

ಒಂದು ಸಂಘವನ್ನು ಕಟ್ಟಿ, ಬೆಳೆಸಿ ದೊಡ್ಡದು ಮಾಡುವುದು ಬಹಳ ಕಷ್ಟದ ಕೆಲಸ. ಸಂಘದ ಹಣವನ್ನು ಜೋಪಾನ ಮಾಡುವುದೇ ದೊಡ್ಡ ಸಂಗತಿ. ಸದಸ್ಯರಲ್ಲಿ ಆಗಾಗ್ಯೆ ರಾಜಕೀಯ, ಭಿನ್ನಾಭಿಪ್ರಾಯಗಳು ಬರುತ್ತವೆ. ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು "ನಮ್ಮ ಹಳ್ಳಿಯಲ್ಲಿ ಗುರುಗಳ ಪೂಜೆ ಇದೆ. ಸಂಘದಿಂದ ಹಣ ಕೊಡಿಸಿ" ಎಂದು ಹೇಳಿದಾಗ ಸಂಘಕ್ಕೂ ನಿಮ್ಮೂರಿನ ಪೂಜೆಗೂ ಯಾವ ಸಂಬಂಧ ಎಂದು ಕೇಳಿದ ಸಿ.ವಿ. ಗೋಪಿನಾಥ್ ನಮಗೆಲ್ಲರಿಗೂ ಬುದ್ಧಿವಾದ ಹೇಳುವಂತವುದು.

ಕನ್ನಡದಲ್ಲಿ ಒಂದು ಮಾತಿದೆಯಲ್ಲ. ಕೃಷ್ಣ ಜನ್ಮಾಷ್ಟಮಿಗೂ ಇಮಾಮ್ ಸಾಹೇಬರಿಗೂ ಯಾವ ಸಂಬಂಧ? ಹಾಗೆ! ಮಾಜೀ ಅಧ್ಯಕ್ಷರಾದ ಎನ್.ಪಿ. ಭಟ್ಟರು ತಮ್ಮ ಸಂಘದ ಕೆಲಸವಾದ ನಂತರ ತಡವಾಗಿ ಆದರೂ ದೂರದ ದೇವ್‌ನಗರದಲ್ಲಿರುವ ತಮ್ಮ ಮನೆಗೆ ಸಿಟಿ ಬಸ್ಸಿನಲ್ಲಿ ಹೋದಾಗ, ಸಂಘದ ಸದಸ್ಯರು ಸಮಿತಿಯ ಸಭೆಗೆ ಬರುತ್ತಿದ್ದಾಗ ಕೇಳುತ್ತಿದ್ದ ಟ್ಯಾಕ್ಸಿ ಬಾಡಿಗೆ ನಿಲ್ಲಿಸಿದ ಸಿ.ವಿ. ಗೋಪಿನಾಥ್‌ರವರ ಧೈರ್ಯ ಮೆಚ್ಚುವಂತವುದು.

ಇಂತಹ ಉದಾಹರಣೆ ನಾನು ಕೇಳಿದ್ದೇನೆ. ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಅಧಿಕಾರಿಯಾದ ಒಬ್ಬರು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು. ಅವರು ಸಂಘಕ್ಕೆ ಕೆಲಸಕ್ಕೋಸ್ಕರ ಬರುವಾಗ ಅವರ ಕಾರಿನ ಪೆಟ್ರೋಲ್ ಹಣ ಕೇಳುತ್ತಿದ್ದರು! ಆಗ ಅವರಿಗೆ ಪ್ರತಿ ತಿಂಗಳು ಬ್ಯಾಂಕಿನಿಂದ ಇಂತಿಷ್ಟೇ ಲೀಟರಿನ ಪೆಟ್ರೋಲ್ ಹಣ ಸಿಗುತಿತ್ತು! ಕನ್ನಡದ ದೇವಾಲಯ ಒಂದರ ಆಡಿಟ್ ರಿಪೋರ್ಟ್‌ನಲ್ಲಿ ಅರ್ಚಕರು ಪರ ಊರಿಗೆ ಹೋದಾಗ ಆಗುವ ಖರ್ಚು ಎರಡು ಬಾರಿ ಕೇಳಿದರು ಎಂದು ಆ ದೇವಾಲಯದ ವಾರ್ಷಿಕ ವರದಿಯಲ್ಲಿ ಲೆಕ್ಕ ಪರಿಶೋಧಕರು ಹೇಳಿದ್ದಾರೆ.

ಇನ್ನು ದಿನದ 24 ಗಂಟೆ ಹಾಗೂ ವರ್ಷದ 365 ದಿನವೂ ಸಂಘದ ಕೆಲಸಕ್ಕೆ ಮೀಸಲು ಮಾಡಿದ ಬಾಲಚಂದ್ರರನ್ನು ಮರೆಲಾಗದಿತ್ತು. ಅನೇಕ ವಿಷಯ ವಿಶೇಷಾಂಕದಲ್ಲಿ 3-4 ಬಾರಿ ಬಂದಿದೆ. ನಿಯಮಗಳನ್ನು ಸಡಿಲಿಸದೇ ಯಾವ ರಾಜಕೀಯಕ್ಕೂ ಒಳಗಾಗದೆ, ಸಂಘದ ಧನವನ್ನು ಕಾಯ್ದು, ದೊಡ್ಡ ಸಂಕೀರಣ ಕಟ್ಟಿಸಿ, ಋಣಮುಕ್ತ ಮಾಡಿದ ದೆಹಲಿ ಕರ್ನಾಟಕ ಸಂಘಕ್ಕೆ ನನ್ನ ನಮನಗಳು.

**ಪ.ವೆಂ. ನಾಯಕ್**

ದೆಹಲಿ ಕರ್ನಾಟಕ ಸಂಘದಲ್ಲಿ ಮೆ 14ರಂದು ನಡೆದ ಅಕ್ಕ ಮತ್ತು ಬಸವ ಜಯಂತಿ ಕಾರ್ಯಕ್ರಮವು ವಿಶಿಷ್ಟವಾಗಿದ್ದು ಬಹಳಷ್ಟು ವಿಚಾರ ಪ್ರಚೋದಕ ಮತ್ತು ಆಸಕ್ತಿದಾಯಕವಾಗಿತ್ತು. ಕನ್ನಡ ನಾಡಿನ ಕ್ರಾಂತಿಕಾರರಾದ ಬಸವಣ್ಣ ಮತ್ತು ಅಕ್ಕ ಮಹಾದೇವಿಯವರ ಕುರಿತು ಮಲ್ಲಿಕಾ ಎಸ್. ಘಂಟಿ ಮತ್ತು ಚಂದ್ರಶೇಖರ್ ನಂಗ್ಲಿ ಅವರು ಮಾಡಿದ ಭಾಷಣಗಳು ವಿಶ್ಲೇಷಣಾತ್ಮಕವಾಗಿದ್ದು, ಶರಣರ ಮಾತು ಮತ್ತು ವಿಚಾರಗಳನ್ನು ಅತ್ಯಂತ ಮನಮುಟ್ಟುವಂತೆ ತಿಳಿಸಿದರು. ಅಂತೆಯೇ ಸಾಂಸ್ಕೃತಿಕ ಕಾರ್ಯಕ್ರಮಗಳೂ ಯುವಕರನ್ನು ಆಕರ್ಷಿಸುವಲ್ಲಿಯೂ ಯಶಸ್ವಿಯಾಗಿತ್ತು. ಅಭಿನಂದನೆಗಳು.

**ಬಿ.ಎಸ್. ಕಲ್ಲೂರ್**

**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
June -2016, Vol. No.26, Issue No.9, Price Rs.1/- RNI Regn. No. 53405/91, DL-SW-1/4016/16-18
Printout Date : June 8th / 9th, Postal Date :10th / 11th, Total Pages-16
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.



ಮೇ 15ರಂದು ನಡೆದ 'ಜೋಗಿಯ ರಾಣಿ' ನಾಟಕ ತಂಡವನ್ನು ಅಭಿನಂದಿಸಿ ಮಾತನಾಡುತ್ತಿರುವ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು.